




ಈ-ಬೆಂಗಳೂರು ಬೆರಗು
E-Bengaluru Beragu

★ E-Bengaluru Beragu ★

MAG (2) PRB/CR/36/24-25
T/KN2024/2076

# ಈ-ಬೆಂಗಳೂರು ಬೆರಗು

ಸಂಪುಟ: 2 Vol: 2 ಸಂಚಿಕೆ: 11 Issue: 11 ಮಾರ್ಚ್ 15 - 31 ಪುಟಗಳು: 12 Pages: 12 ಬೆಲೆ: 15.00 ರೂ.




## ಇಸ್ರೇಲ್-ಇರಾನ್ ಕದನ ಹೋರ್ಮುಜ್ ಸಮುದ್ರ ಸಂಚಾರ ಬಂದ್

## ಪಂಚರಾಜ್ಯಗಳ ಚುನಾವಣೆ ಘೋಷಣೆ












## ಸಿದ್ದರಾಮಯ್ಯರವರ 17ನೇ ಕರ್ನಾಟಕ ಬಜೆಟ್

## ಟ್ವೆಂಟಿ-ಟ್ವೆಂಟಿ ವಿಶ್ವಕಪ್ ಭಾರತ ಚಾಂಪಿಯನ್





ಈ–ಬೆಂಗಳೂರು ಬೆರಗು
E-Bengaluru Beragu



ಸಂಪಾದಕರ ಪುಟ

# ಇ–ಬೆಂಗಳೂರು ಬೆರಗು: ಡಿಜಿಟಲ್ ಕನಸಿನ ನಗರ




ಇಂದು ಭಾರತದ "ಸಿಲಿಕಾನ್ ಸಿಟಿ" ಎಂದು ಗುರುತಿಸಿಕೊಂಡಿರುವ ಬೆಂಗಳೂರು ನಗರ, ತನ್ನ ತಂತ್ರಜ್ಞಾನ ಪ್ರಭಾವದ ಪಯಣವನ್ನು 1980ರ ದಶಕದ ಆರಂಭದಲ್ಲೇ ಆರಂಭಿಸಿತ್ತು. ವಿಶೇಷವಾಗಿ 1982ರ ನಂತರ, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಕ್ಷೇತ್ರದಲ್ಲಿ ನಡೆದ ಬೆಳವಣಿಗೆಗಳು ನಗರವನ್ನು ಜಾಗತಿಕ ಐಟಿ ಕೇಂದ್ರವನ್ನಾಗಿ ರೂಪಿಸಿವೆ. ಭಾರತದ ಐಟಿ ರಾಜಧಾನಿ ಎಂದೇ ಖ್ಯಾತಿ ಪಡೆದ ಬೆಂಗಳೂರು ಇಂದು "ಇ–ಬೆಂಗಳೂರು" ಎಂಬ ಹೊಸ ಗುರುತಿನೊಂದಿಗೆ ಮತ್ತೊಂದು ಹಂತದ ಅಭಿವೃದ್ಧಿಯತ್ತ ಹೆಜ್ಜೆ ಇಡುತ್ತಿದೆ. ತಂತ್ರಜ್ಞಾನ, ಸ್ಟಾರ್ಟ್‌ಅಪ್‌ಗಳು ಮತ್ತು ಡಿಜಿಟಲ್ ಆಡಳಿತದ ಸಂಯೋಜನೆಯಾಗಿ ರೂಪುಗೊಳ್ಳುತ್ತಿರುವ ಈ ನಗರ, ದೇಶದ ಆರ್ಥಿಕ ಪ್ರಗತಿಯ ಪ್ರಮುಖ ಚಾಲಕವಾಗಿದೆ.

ಒಮ್ಮೆ "ಗಾರ್ಡನ್ ಸಿಟಿ" ಎಂದು ಕರೆಯಲ್ಪಟ್ಟ ಬೆಂಗಳೂರು, ಈಗ ಡಿಜಿಟಲ್ ಕ್ರಾಂತಿಯ ಹೃದಯಭಾಗವಾಗಿದೆ. Infosys, Wipro ಮುಂತಾದ ಕಂಪನಿಗಳು ಇಲ್ಲಿ ಹುಟ್ಟಿ ಬೆಳೆದಿದ್ದು, ಜಾಗತಿಕ ಮಟ್ಟದಲ್ಲಿ ಭಾರತದ ತಂತ್ರಜ್ಞಾನ ಸಾಮರ್ಥ್ಯವನ್ನು ತೋರಿಸಿವೆ.

ಆ ಕಾಲದಲ್ಲಿ ಸ್ಥಾಪಿತವಾದ Electronics City, ಬೆಂಗಳೂರಿನ ಕೈಗಾರಿಕಾ ಇತಿಹಾಸದಲ್ಲಿ ಮಹತ್ವದ ಮೈಲುಗಲ್ಲಾಗಿ ಪರಿಣಮಿಸಿತು. ಎಲೆಕ್ಟ್ರಾನಿಕ್ ಉದ್ಯಮಗಳಿಗೆ ಮೀಸಲಾದ ಈ ವಲಯವು ನಂತರ ಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ಕಂಪನಿಗಳ ಕೇಂದ್ರವಾಗಿ ಬೆಳೆಯಿತು.

"ಇ–ಬೆಂಗಳೂರು" ಪರಿಕಲ್ಪನೆಯು ಕೇವಲ ಐಟಿ ಉದ್ಯಮಕ್ಕೆ ಮಾತ್ರ ಸೀಮಿತವಲ್ಲ. ಇದು ಇ–ಗವರ್‌ನನ್ಸ್, ಸ್ಮಾರ್ಟ್ ಸಿಟಿ ಯೋಜನೆಗಳು, ಡಿಜಿಟಲ್ ಸೇವೆಗಳು ಮತ್ತು ಸ್ಟಾರ್ಟ್‌ಅಪ್ ಸಂಸ್ಕೃತಿಯನ್ನು ಒಳಗೊಂಡ ಸಮಗ್ರ ಅಭಿವೃದ್ಧಿಯ ಮಾದರಿಯಾಗಿದೆ. ನಾಗರಿಕರಿಗೆ ಆನ್‌ಲೈನ್ ಸೇವೆಗಳು, ಡಿಜಿಟಲ್ ಪಾವತಿಗಳು, ಮತ್ತು ಸುಲಭ ಆಡಳಿತ ವ್ಯವಸ್ಥೆಗಳನ್ನು ಒದಗಿಸುವ ಮೂಲಕ ನಗರ ಜೀವನವನ್ನು ಸುಧಾರಿಸುವ ಪ್ರಯತ್ನ ನಡೆಯುತ್ತಿದೆ.

ಸಾರ್ವಜನಿಕ ವಲಯದ ಸಂಸ್ಥೆಗಳು ಈ ಕ್ರಾಂತಿಯ ಬುನಾದಿ ಹಾಕಿದವು. Bharat Electronics Limited, Hindustan Aeronautics Limited ಮತ್ತು Indian Space Research Organization ಮುಂತಾದ ಸಂಸ್ಥೆಗಳು ತಾಂತ್ರಿಕ ಪರಿಣತಿ ಮತ್ತು ಸಂಶೋಧನೆಯನ್ನು ಉತ್ತೇಜಿಸಿ, ನಗರದ ತಂತ್ರಜ್ಞಾನ ಸಾಮರ್ಥ್ಯವನ್ನು ಬಲಪಡಿಸಿವೆ.

1990ರ ದಶಕದಲ್ಲಿ ದೇಶದ ಆರ್ಥಿಕ ಉದಾರೀಕರಣದ ಬಳಿಕ ಕಂಪ್ಯೂಟರ್ ಮತ್ತು ಐಟಿ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ಕಂಡುಬಂದಿತು. ಇದೇ ಸಮಯದಲ್ಲಿ Infosys ಮತ್ತು Wipro ನಂತಹ ಸಂಸ್ಥೆಗಳು ಜಾಗತಿಕ ಮಟ್ಟದಲ್ಲಿ ತಮ್ಮ ಹೆಜ್ಜೆ ಗುರುತು ಮೂಡಿಸಿ, ಬೆಂಗಳೂರನ್ನು ಐಟಿ ನಕ್ಷೆಯಲ್ಲಿ ಪ್ರಭಾವಶಾಲಿಯಾಗಿ ಗುರುತಿಸಿವೆ. 2000ರ ನಂತರ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶದಿಂದ ಬೆಂಗಳೂರು ಜಾಗತಿಕ ಐಟಿ ಹಬ್ ಆಗಿ ರೂಪುಗೊಂಡಿತು. IBM, Microsoft ಮತ್ತು Google ಸಂಸ್ಥೆಗಳು ತಮ್ಮ ಅಭಿವೃದ್ಧಿ ಕೇಂದ್ರಗಳನ್ನು ಇಲ್ಲಿ ಸ್ಥಾಪಿಸಿ, ಉದ್ಯೋಗಾವಕಾಶ ಮತ್ತು ವಿದೇಶಿ ಹೂಡಿಕೆಯನ್ನು ಹೆಚ್ಚಿಸಿವೆ.


2010ರ ನಂತರ ಸ್ಟಾರ್ಟ್‌ಅಪ್ ಸಂಸ್ಕೃತಿ ಮತ್ತು ಡಿಜಿಟಲ್ ತಂತ್ರಜ್ಞಾನಗಳ ಬೆಳವಣಿಗೆ ಬೆಂಗಳೂರಿಗೆ ಹೊಸ ಚೈತನ್ಯ ನೀಡಿತು. ಕೃತಕ ಬುದ್ಧಿಮತ್ತೆ (AI), ಕ್ಲೌಡ್ ಕಂಪ್ಯೂಟಿಂಗ್ ಮತ್ತು ಫಿನ್‌ಟೆಕ್ ಕ್ಷೇತ್ರಗಳಲ್ಲಿ ನಗರವು ಮುಂಚೂಣಿಯಲ್ಲಿ ನಿಂತಿದೆ. ನಗರದ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆ ವಿಶೇಷ ಗಮನ ಸೆಳೆಯುತ್ತದೆ. ಯುವ ಉದ್ಯಮಿಗಳು ಹೊಸ ಆವಿಷ್ಕಾರಗಳೊಂದಿಗೆ ಜಾಗತಿಕ ಮಾರುಕಟ್ಟೆಗೆ ಕಾಲಿಟ್ಟಿದ್ದಾರೆ. ಫಿನ್‌ಟೆಕ್, ಎಡ್‌ಟೆಕ್, ಹೆಲ್ತ್‌ಟೆಕ್ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಬೆಂಗಳೂರಿನ ಸ್ಟಾರ್ಟ್‌ಅಪ್‌ಗಳು ಮುಂಚೂಣಿಯಲ್ಲಿವೆ.

ಆದರೆ ಈ ಬೆಳವಣಿಗೆಗೆ ಸವಾಲುಗಳೂ ಜೊತೆಯಲ್ಲಿವೆ. ಟ್ರಾಫಿಕ್ ದಟ್ಟಣೆ, ಮೂಲಸೌಕರ್ಯ ಒತ್ತಡ, ನೀರಿನ ಕೊರತೆ ಮತ್ತು ಪರಿಸರ ಸಮಸ್ಯೆಗಳು ನಗರ ಅಭಿವೃದ್ಧಿಗೆ ಅಡ್ಡಿಯಾಗುತ್ತಿವೆ. ಡಿಜಿಟಲ್ ಪ್ರಗತಿಯ ಜೊತೆಗೆ ಭೌತಿಕ ಮೂಲಸೌಕರ್ಯವನ್ನು ಸಮನ್ವಯಗೊಳಿಸುವುದು ಇ–ಬೆಂಗಳೂರು ಕನಸಿನ ಪ್ರಮುಖ ಅಗತ್ಯವಾಗಿದೆ.

ರಾಜ್ಯ ಸರ್ಕಾರ ಬೆಂಗಳೂರು ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿ ಹೂಡಿಕೆ ಮಾಡುವ ಮೂಲಕ ಮೆಟ್ರೋ ವಿಸ್ತರಣೆ, ರಸ್ತೆ ಸುಧಾರಣೆ ಮತ್ತು ಸ್ಮಾರ್ಟ್ ಸಿಟಿ ಯೋಜನೆಗಳನ್ನು ಜಾರಿಗೆ ತರುತ್ತಿದೆ. ಇದರಿಂದ ನಾಗರೀಕರಿಗೆ ನಗರ ಜೀವನವು ಮತ್ತಷ್ಟು ಸುಧಾರಿತ ಮತ್ತು ಸುಗಮವಾಗುವ ನಿರೀಕ್ಷೆ ಇದೆ.

ಒಟ್ಟಿನಲ್ಲಿ, 1982ರಲ್ಲಿ ಬಿತ್ತಿದ ಎಲೆಕ್ಟ್ರಾನಿಕ್ ಕ್ರಾಂತಿಯ ಬೀಜ, ಇಂದು ವಿಶ್ವ ಮಟ್ಟದ ತಂತ್ರಜ್ಞಾನ ವೃಕ್ಷವಾಗಿ ಬೆಳೆಯಿತು. "ಗಾರ್ಡನ್ ಸಿಟಿ"ಯಿಂದ "ಡಿಜಿಟಲ್ ರಾಜಧಾನಿ"ವರೆಗೆ ಬೆಂಗಳೂರು ಸಾಧಿಸಿದ ಪಯಣ. ಈ ಶತಮಾನ ಕಂಡ ಅತ್ಯಾದ್ಭುತಗಳಲ್ಲಿ ವಿಶೇಷ ತಾಂತ್ರಿಕ ಸ್ಫೋಟವಾಗಿದೆ.

"ಇ–ಎಲೆಕ್ಟ್ರಾನಿಕ್ಸ್ ತಾಂತ್ರಿಕ ಬೆಂಗಳೂರು" ಕೇವಲ ತಂತ್ರಜ್ಞಾನ ನಗರವಲ್ಲ; ಅದು ಭವಿಷ್ಯದ ನಗರ ಜೀವನದ ಮಾದರಿ. ಡಿಜಿಟಲ್ ನವೀನತೆ ಮತ್ತು ಮಾನವೀಯ ಮೌಲ್ಯಗಳನ್ನು ಒಂದಾಗಿಸುವ ಈ ನಗರ, ಭಾರತದ ಪ್ರಗತಿಯ ಉಜ್ವಲ ಭವಿಷ್ಯಕ್ಕೆ ಕನ್ನಡಿ ಹಿಡಿದಂತಾಗಿದೆ. ಈ ಕರ್ನಾಟಕದ ಮತ್ತು ಕನ್ನಡಿಗರ ಕಣ್ಮಣಿನಗರ ಭಾರತದ ಕೋಟ್ಯಾಂತರ ಜನರ ಜೀವನದ ಬದುಕಿಗೆ ಬಾಳದೀಪವಾಗಿದೆ.



ಈ ಬೆಂಗಳೂರು ಬೆರಗು ಪತ್ರಿಕೆ ವಿಭಾಗಕ್ಕೆ ಲೇಖನಗಳು, ವ್ಯಕ್ತಿಪರಿಚಯ, ಪುಸ್ತಕ ವಿಮರ್ಶೆ, ಸಿನೆಮಾ ವಿಮರ್ಶೆ, ನಾಟಕ ವಿಮರ್ಶೆ, ಕವನ, ಸಾಮಾಜಿಕ ಪ್ರತಿಕ್ರಿಯೆ, ಸಂಪಾದಕರಿಗೆ ಪತ್ರ, ದೂರು–ದುಮ್ಮಾನ ಮೊದಲಾದ ವಿಷಯ ವೈವಿಧ್ಯಗಳನ್ನು ಚಿಕ್ಕ ಮತ್ತು ಚೊಕ್ಕವಾಗಿ 1000 ಪದಗಳು ಮೀರದಂತೆ ಕಳುಹಿಸಲು ಈ ಕೆಳಗಿನ ಇ–ಮೇಲ್ ವಿಳಾಸವನ್ನು ಬಳಸಿ ಸಲ್ಲಿಸಬಹುದಾಗಿರುತ್ತದೆ.

**ಕಥೆ–ಕವನ ಕಳುಹಿಸುವ ಮುನ್ನ**

* ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು.
* ಕಥೆಗೆ ಗರಿಷ್ಠ ಮಿತಿ–ಎರಡು ಸಾವಿರ ಪದಗಳು.
* ಕಥೆ–ಕವನಗಳು ಯೂನಿಕೋಡ್‌ನಲ್ಲಿ ಇರಬೇಕು.
* ಕಥೆ/ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ–ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು.
* ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು.
* ಸಂಪಾದಕರ ತೀರ್ಮಾನವೇ ಅಂತಿಮ.

ಇ–ಮೇಲ್ ವಿಳಾಸ : ebbvijay@gmail.com

**ಇ–ಬೆಂಗಳೂರು ಬೆರಗು ವಿಳಾಸ:** ಇ–ಬೆಂಗಳೂರು ಬೆರಗು, ಕೇರಾಫ್ ಚನ್ನಮ್ಮ ಅಸೋಸಿಯೇಟ್ಸ್, ನಂ.1303, ನೆಲಮಹಡಿ, 4ನೇ ಕ್ರಾಸ್, ಅಶೋಕ್ ನಗರ, ಬಿಎಸ್‌ಕೆ 1ನೇ ಹಂತ, ಕತ್ರಿಗುಪ್ಪೆ/ವಿದ್ಯಾಪೀಠ ಮುಖ್ಯರಸ್ತೆ, ಬೆಂಗಳೂರು–560 050.

EBB Office # 1303, Ground Floor, 4th Cross, Ashok Nagar, BSK 1st Stage, Kathriguppe/Vidyapeeta Main Road, Bengaluru-560 050.

# ಸಿದ್ದರಾಮಯ್ಯರವರ 17ನೇ ಕರ್ನಾಟಕ ಬಜೆಟ್



2026–27ನೇ ಸಾಲಿನ 17ನೇ ರಾಜ್ಯ ಬಜೆಟ್ ಅನ್ನು ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ಮಂಡಿಸಿದ್ದಾರೆ. ಈ ಮೂಲಕ ಕರ್ನಾಟಕದಲ್ಲಿ ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ ಹಣಕಾಸು ಮಂತ್ರಿ ಮತ್ತು ಮುಖ್ಯಮಂತ್ರಿಯಾಗಿದ್ದಾರೆ. ಈ ಬಾರಿಯ ಬಜೆಟ್ ಗಾತ್ರ ರೂ. 4,48,004 ಕೋಟಿಯಾಗಿದೆ. ಸಿದ್ದರಾಮಯ್ಯ ಅವರು 1995 ಮತ್ತು 1996ರಲ್ಲಿ ಎಚ್.ಡಿ ದೇವೇಗೌಡರ ಅವರ ನೇತೃತ್ವದಲ್ಲಿ 2 ಬಾರಿ 1997–1998 ಮತ್ತು 1999 ನಡುವೆ ಜೆ.ಎಚ್ ಪಟೇಲ್ ಅವರ ನೇತೃತ್ವದಲ್ಲಿ 3 ಬಾರಿ ಹಾಗೂ 2005–2006ರಲ್ಲಿ ಎನ್.ಧರ್ಮಸಿಂಗ್ ಅವರ ನೇತೃತ್ವದಲ್ಲಿ 2 ಬಾರಿ ಬಜೆಟ್ ಮಂಡನೆ ಮಾಡಿದ್ದಾರೆ. 2013 ರಿಂದ 2018ರವರೆಗೆ ಹಾಗೂ 2023 ರಿಂದ ಈವರೆಗೆ ಒಟ್ಟಾರೆ ಬಜೆಟ್‌ಗಳನ್ನು ಮಂಡಿಸಿದ್ದಾರೆ. ಸಿದ್ದರಾಮಯ್ಯ ಅವರು ತಮ್ಮ ಮೊದಲ ಬಜೆಟ್‌ನ್ನು 1995–96ರಲ್ಲಿ ಎಚ್.ಡಿ ದೇವೇಗೌಡರ ಅವರ ನೇತೃತ್ವದ ರಾಜ್ಯಸರ್ಕಾರವಿದ್ದಾಗ ಮಂಡಿಸಿದರು. ಬಜೆಟ್‌ಗಾತ್ರ ಸುಮಾರು ರೂ. 12,616 ಕೋಟಿಯಾಗಿತ್ತು. 1997, 1998 ಮತ್ತು 1999 ನಡುವೆ ಜೆ.ಎಚ್ ಪಟೇಲ್ ಅವರ ನೇತೃತ್ವದಲ್ಲಿ ಸಿದ್ದರಾಮಯ್ಯ ಅವರು ಒಟ್ಟು 3 ಬಾರಿ ಬಜೆಟ್ ಮಂಡನೆ ಮಾಡಿದ್ದರು. ಈ ಅವಧಿಯಲ್ಲಿ 1997–1998ರ ಬಜೆಟ್ ಗಾತ್ರ 12,456.68 ಕೋಟಿ ಹಾಗೂ 1999ರ 2013 ರಿಂದ 2018ರ ನಡುವೆ ಸಿದ್ದರಾಮಯ್ಯ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರು. 2013–14ರಲ್ಲಿ ಬಜೆಟ್ ಗಾತ್ರ ರೂ. 1,21,611 ಕೋಟಿ 2014–15ರಲ್ಲಿ ಬಜೆಟ್ ಗಾತ್ರ ರೂ. 1,38,008 ಕೋಟಿ, 2015–16 ಬಜೆಟ್ ಗಾತ್ರ ರೂ. 1,42,534 ಕೋಟಿ, ಬಜೆಟ್ ಗಾತ್ರ 2016–17ರಲ್ಲಿ ರೂ. 1,63,419 ಕೋಟಿ, 2017–18ರಲ್ಲಿ ಬಜೆಟ್ ಗಾತ್ರ ರೂ. 1,86,561 ಕೋಟಿ, ಹಾಗೂ 2018–19ರಲ್ಲಿ ಬಜೆಟ್ ಗಾತ್ರ ರೂ. 2,09,181 ಕೋಟಿಯಾಗಿತ್ತು. 2023ರಲ್ಲಿ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅವರು 2023–24ರಲ್ಲಿ ಬಜೆಟ್ ಗಾತ್ರ ರೂ. 3,27,453 ಕೋಟಿ, 2024–25ರಲ್ಲಿ ಬಜೆಟ್ ಗಾತ್ರ ರೂ. 3,71,383 ಕೋಟಿ ಹಾಗೂ 2026–27ರಲ್ಲಿ ಬಜೆಟ್ ಗಾತ್ರ ರೂ. 4,48,004 ಕೋಟಿ ಇತ್ತು. 2026–27ರಲ್ಲಿ ಪ್ರಸ್ತುತ ಮಂಡಿಸಿರುವ ಈ ಬಜೆಟ್‌ಗಾತ್ರ ರೂ. 4,48,004 ಕೋಟಿ ಆಗಿರುತ್ತದೆ. ಆದರೆ ಈ ಬಜೆಟ್ ಬಿಟ್ಟಿ ಗ್ಯಾರಂಟಿ ಯೋಜನೆಗಳಿಂದ ನಲುಗಿಹೋಗಿ ಅಭಿವೃದ್ಧಿ ಕಾಮಗಾರಿಗಳಿಗೆ ಹಣಕಾಸು ಒದಗಿಸದೆ ಅಡಚಣೆ ಉಂಟು ಮಾಡಿದೆ ಎಂದು ಆರ್ಥಿಕ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ 2026–27ನೇ ಸಾಲಿನ ರಾಜ್ಯ ಬಜೆಟ್ ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ದಿಕ್ಕು ನಿರ್ಧರಿಸುವ ಮಹತ್ವದ ದಾಖಲೆ ಆಗಿದೆ. ಸುಮಾರು ರೂ. 4.48 ಲಕ್ಷ ಕೋಟಿ ಮೊತ್ತದ ಈ ಬಜೆಟ್ ಕಲ್ಯಾಣ ಯೋಜನೆಗಳು, ಮೂಲಸೌಕರ್ಯ ಅಭಿವೃದ್ಧಿ ಮತ್ತು ತಂತ್ರಜ್ಞಾನ ಕ್ಷೇತ್ರಗಳಿಗೆ ಸಮಾನ ಒತ್ತು ನೀಡುವ ಮೂಲಕ ಗಮನ ಸೆಳೆದಿದೆ. ಬಜೆಟ್‌ನಲ್ಲಿ ಒಟ್ಟು ವೆಚ್ಚ ರೂ. 4,48,004 ಕೋಟಿ ಆಗಿದ್ದು, ಆದಾಯ ರೂ. 4,47,240 ಕೋಟಿ ಎಂದು ಅಂದಾಜಿಸಲಾಗಿದೆ. ಇದರಿಂದ ರಾಜ್ಯವು ಕೊರತೆ ಬಜೆಟ್ ದಿಕ್ಕಿನಲ್ಲಿ ಸಾಗುತ್ತಿರುವುದು ಸ್ಪಷ್ಟವಾಗಿದೆ. ಹಣಕಾಸು ಕೊರತೆ ರೂ. 97 ಸಾವಿರ ಕೋಟಿಗೂ ಅಧಿಕವಾಗಿದ್ದು, ಆರ್ಥಿಕ ಶಿಸ್ತಿನ ಮೇಲೆ ಸವಾಲು ಮೂಡಿಸಿದೆ. ರಾಜ್ಯದ ಜನಪ್ರಿಯ ಗ್ಯಾರಂಟಿ ಯೋಜನೆಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಹಂಚಿಕೆ ಮಾಡಲಾಗಿದೆ. ಶಕ್ತಿ, ಅನ್ನಭಾಗ್ಯ, ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ ಯೋಜನೆಗಳು ಮುಂದುವರಿದಿದ್ದು, ಮಹಿಳಾ ಮತ್ತು ಬಡ ವರ್ಗಗಳ ಜೀವನಮಟ್ಟವನ್ನು ಸುಧಾರಿಸುವ ದಿಸೆಯಲ್ಲಿ ಸರ್ಕಾರ ತನ್ನ ಬದ್ಧತೆಯನ್ನು ಪುನರುಚ್ಚರಿಸಿದೆ. ಕೃಷಿ ಕ್ಷೇತ್ರಕ್ಕೂ ಬಜೆಟ್‌ನಲ್ಲಿ ವಿಶೇಷ ಗಮನ ನೀಡಲಾಗಿದೆ. ರೈತರಿಗೆ ನೇರ ಸಹಾಯ, ಉಚಿತ ವಿದ್ಯುತ್ ಯೋಜನೆಗಳು ಹಾಗೂ ಕೃಷಿ ಆಧಾರಿತ ಮೂಲಸೌಕರ್ಯ ಅಭಿವೃದ್ಧಿಗೆ ಅನುದಾನ ನೀಡಲಾಗಿದೆ. ಇದು ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವ ಪ್ರಯತ್ನವಾಗಿ ಕಾಣುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ 800 ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಾಗಿ ಮೇಲ್ದರ್ಜೆಗೇರಿಸುವ ಘೋಷಣೆ ಹಾಗೂ 15 ಸಾವಿರ ಶಿಕ್ಷಕರ ನೇಮಕಾತಿ ಪ್ರಸ್ತಾವನೆ ಶಿಕ್ಷಣ ಗುಣಮಟ್ಟ ಸುಧಾರಣೆಗೆ ದಾರಿ ತೆರೆದಿದೆ. ಶಾಲಾ ಕಟ್ಟಡಗಳ ಅಭಿವೃದ್ಧಿಗೆ ಸಹ ದೊಡ್ಡ ಮೊತ್ತ ಮೀಸಲಾಗಿದೆ. ಬೆಂಗಳೂರು ನಗರಾಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗಿದ್ದು, ರೂ. 7,000 ಕೋಟಿ ಅನುದಾನ ಘೋಷಿಸಲಾಗಿದೆ. ಮೆಟ್ರೋ ವಿಸ್ತರಣೆ, ಮೂಲಸೌಕರ್ಯ ಸುಧಾರಣೆ ಹಾಗೂ ಹೊಸ ಕ್ರೀಡಾಂಗಣ ನಿರ್ಮಾಣ ಯೋಜನೆಗಳು ನಗರ ಅಭಿವೃದ್ಧಿಯ ಪ್ರಮುಖ ಅಂಶಗಳಾಗಿವೆ. ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯ ತನ್ನ ಮುನ್ನಡೆ ಮುಂದುವರಿಸಲು ೦ಖ ಮತ್ತು ರೋಬೋಟಿಕ್ಸ್ ಪಾರ್ಕ್ ಸ್ಥಾಪನೆ, ಮೈಸೂರನ್ನು ದ್ವಿತೀಯ ಐಟಿ ಕೇಂದ್ರವಾಗಿ ರೂಪಿಸುವ ಯೋಜನೆಗಳು ಘೋಷಣೆಯಾಗಿವೆ. ಇದು ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ನಿರೀಕ್ಷೆ ಮೂಡಿಸಿದೆ. ಪರಿಸರ ಸಂರಕ್ಷಣೆ ಹಾಗೂ ಪ್ರವಾಹ ನಿಯಂತ್ರಣಕ್ಕೂ ಬಜೆಟ್‌ನಲ್ಲಿ ಪ್ರಾಮುಖ್ಯತೆ ನೀಡಲಾಗಿದೆ. ಇದರಿಂದ ಪ್ರಕೃತಿ ವಿಕೋಪಗಳ ಪರಿಣಾಮವನ್ನು ಕಡಿಮೆ ಮಾಡುವ ಉದ್ದೇಶ ವ್ಯಕ್ತವಾಗಿದೆ. ಒಟ್ಟಾರೆ, ಈ ಬಜೆಟ್ ಕಲ್ಯಾಣ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ನಡುವಿನ ಸಮತೋಲನ ಸಾಧಿಸಲು ಪ್ರಯತ್ನಿಸಿದರೂ, ಹೆಚ್ಚುತ್ತಿರುವ ಹಣಕಾಸು ಕೊರತೆ ರಾಜ್ಯದ ಮುಂದಿನ ಆರ್ಥಿಕ ನೀತಿಗಳ ಮೇಲೆ ಮಹತ್ವದ ಪ್ರಭಾವ ಬೀರುವ ಸಾಧ್ಯತೆ ಇದೆ.

# ಇಸ್ರೇಲ್–ಇರಾನ್ ಕದನ – ಹೋರ್ಮುಜ್ ಸಮುದ್ರ ಸಂಚಾರ ಬಂದ್



ನವದೆಹಲಿ: 20ಕ್ಕೂ ಹೆಚ್ಚು ದೇಶಗಳು ಹಾರ್ಮುಜ್ ಜಲಸಂಧಿಯ ಮೂಲಕ ಸುರಕ್ಷಿತ ಮಾರ್ಗವನ್ನು ಖಚಿತಪಡಿಸಿಕೊಳ್ಳುವ ಪ್ರಯತ್ನಗಳನ್ನು ಬೆಂಬಲಿಸಲು ಸಿದ್ಧತೆಯನ್ನು ವ್ಯಕ್ತಪಡಿಸಿವೆ. ವಿಶ್ವದ ತೈಲ ಮತ್ತು ಅನಿಲದ ಗಮನಾರ್ಹ ಪಾಲನ್ನು ಹೊಂದಿರುವ ನಿರ್ಣಾಯಕ ಮಾರ್ಗವನ್ನು ಪರಿಣಾಮ ಕಾರಿಯಾಗಿ ಮುಚ್ಚಲಾಗಿದೆ ಎಂದು ಅವರು ವಿವರಿಸಿದ ಇರಾನ್ ಅನ್ನು ಬಲವಾಗಿ ಖಂಡಿಸಿದ್ದಾರೆ.

ಜಂಟಿ ಹೇಳಿಕೆಯಲ್ಲಿ, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಬಹ್ರೇನ್ ಸೇರಿದಂತೆ 22 ರಾಷ್ಟ್ರಗಳು ಪರ್ಷಿಯನ್ ಕೊಲ್ಲಿಯಲ್ಲಿ ಇರಾನ್‌ನ ಕ್ರಮಗಳನ್ನು ತೀವ್ರವಾಗಿ ಟೀಕಿಸಿವೆ.

"ಕೊಲ್ಲಿಯಲ್ಲಿ ನಿರಾಯುಧ ವಾಣಿಜ್ಯ ಹಡಗುಗಳ ಮೇಲೆ ಇರಾನ್ ಇತ್ತೀಚೆಗೆ ನಡೆಸಿದ ದಾಳಿ, ತೈಲ ಮತ್ತು ಅನಿಲ ಸ್ಥಾಪನೆಗಳು ಸೇರಿದಂತೆ ನಾಗರಿಕ ಮೂಲಸೌಕರ್ಯಗಳ ಮೇಲಿನ ದಾಳಿ ಮತ್ತು ಇರಾನಿನ ಪಡೆಗಳು ಹಾರ್ಮುಜ್ ಜಲಸಂಧಿಯನ್ನು ವಾಸ್ತವಿಕವಾಗಿ ಮುಚ್ಚಿರುವುದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ" ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಜಲಸಂಧಿಯ ಮೂಲಕ ಸುರಕ್ಷಿತ ನ್ಯಾವಿಗೇಷನ್ ಅನ್ನು ಕಾಪಾಡಿಕೊಳ್ಳಲು ಸಂಘಟಿತ ಪ್ರಯತ್ನಗಳಿಗೆ ಕೊಡುಗೆ ನೀಡಲು ತಾವು ಸಿದ್ಧರಿದ್ದೇವೆ ಎಂದು ದೇಶಗಳು ಹೇಳಿವೆ ಮತ್ತು ಈಗಾಗಲೇ ಭಾಗಿಯಾಗಿರುವ ರಾಷ್ಟಗಳ ನಿರಂತರ ಯೋಜನೆಯನ್ನು ಸ್ವಾಗತಿಸಿವೆ. ಇಂಧನ ಸೌಲಭ್ಯಗಳು ಸೇರಿದಂತೆ ನಾಗರಿಕ ಮೂಲಸೌಕರ್ಯಗಳ ಮೇಲಿನ ದಾಳಿಯನ್ನು ತಕ್ಷಣದ ಮತ್ತು ಸಮಗ್ರ ನಿಲ್ಲಿಸಲು ಅವರು ಕರೆ ನೀಡಿವೆ.

"ಜಲಸಂಧಿಯ ಮೂಲಕ ಸುರಕ್ಷಿತ ಮಾರ್ಗವನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಪ್ರಯತ್ನಗಳಿಗೆ ಕೊಡುಗೆ ನೀಡಲು ನಾವು ನಮ್ಮ ಸಿದ್ಧತೆಯನ್ನು ವ್ಯಕ್ತಪಡಿಸುತ್ತೇವೆ. ಪೂರ್ವಸಿದ್ಧತಾ ಯೋಜನೆಯಲ್ಲಿ ತೊಡಗಿರುವ ರಾಷ್ಟ್ರಗಳ ಬದ್ಧತೆಯನ್ನು ನಾವು ಸ್ವಾಗತಿಸುತ್ತೇವೆ" ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿರುವ ಸಂಘರ್ಷದ ಬಗ್ಗೆ ದೇಶಗಳು ತೀವ್ರ ಕಳವಳ ವ್ಯಕ್ತಪಡಿಸಿವೆ. ಹಾರ್ಮುಜ್ ಜಲಸಂಧಿಯನ್ನು ನಿರ್ಬಂಧಿಸುವ ಪ್ರಯತ್ನದಲ್ಲಿ ಹಡಗುಗಳ ಮೇಲೆ ಗಣಿಗಳು, ಡ್ರೋನ್ ಮತ್ತು ಕ್ಷಿಪಣಿ ದಾಳಿಗಳನ್ನು ನಿಲ್ಲಿಸುವಂತೆ ಅವರು ಇರಾನ್ ಅನ್ನು ಒತ್ತಾಯಿಸಿದರು.

"ನೌಕಾಯಾನದ ಸ್ವಾತಂತ್ರ್ಯವು ಅಂತಾರಾಷ್ಟ್ರೀಯ ಕಾನೂನಿನ ಮೂಲಭೂತ ತತ್ವವಾಗಿದೆ, ಇದರಲ್ಲಿ ಸಮುದ್ರದ ಕಾನೂನಿನ ಮೇಲಿನ ವಿಶ್ವಸಂಸ್ಥೆಯ ಒಡಂಬಡಿಕೆ ಸೇರಿದೆ. ಇರಾನ್‌ನ ಕ್ರಮಗಳ ಪರಿಣಾಮಗಳನ್ನು ವಿಶ್ವದ ಎಲ್ಲಾ ಭಾಗಗಳಲ್ಲಿನ ಜನರು, ವಿಶೇಷವಾಗಿ ಅತ್ಯಂತ ದುರ್ಬಲರು ಅನುಭವಿಸುತ್ತಾರೆ" ಎಂದು ರಾಷ್ಟ್ರಗಳು ಹೇಳಿವೆ.

ಈ ಪ್ರದೇಶದಲ್ಲಿ ವಾರಗಳ ಸಂಘರ್ಷ ಹೆಚ್ಚಿದ ನಂತರ ಈ ಘೋಷಣೆ ಬಂದಿದೆ. ಫೆಬ್ರವರಿ 28ರಂದು ಯುನೈಟೆಡ್ ಸ್ಟೇಟ್ಸ್ ಮತ್ತು ಇಸ್ರೇಲ್ ಇರಾನ್ ಮೇಲೆ ದಾಳಿ ನಡೆಸಿದ ನಂತರ, ಟೆಹ್ರಾನ್ ಗಲ್ಫ್ ದೇಶಗಳು ಮತ್ತು ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗುವ ಹಡಗುಗಳ ಮೇಲೆ ದಾಳಿ ಮಾಡುವ ಮೂಲಕ ಪ್ರತೀಕಾರ ತೀರಿಸಿಕೊಂಡಿದೆ.

ಹಡಗು ಸಾಗಣೆಗೆ ಅಡಚಣೆ ಗಮನಾರ್ಹವಾಗಿದೆ. ಮಾರ್ಚ್ 1 ಮತ್ತು 19ರ ನಡುವೆ, ಸರಕು ವಾಹಕಗಳು ಜಲಸಂಧಿಯ ಮೂಲಕ ಕೇವಲ 116 ಕ್ರಾಸಿಂಗ್ ಗಳನ್ನು ಮಾಡಿವೆ. ಇದು ಸಾಮಾನ್ಯ ಮಟ್ಟದಿಂದ ಶೇಕಡಾ 95 ರಷ್ಟು ಕುಸಿತವಾಗಿದೆ ಎಂದು ವಿಶ್ಲೇಷಣಾ ಸಂಸ್ಥೆ ಕೆಪ್ಲರ್‌ನ ಅಂಕಿಅಂಶಗಳು ತಿಳಿಸಿವೆ.

# ಪಶ್ಚಿಮ ಏಷ್ಯಾ ಸಂಘರ್ಷ ತೀವ್ರ: ಇರಾನ್–ಇಸ್ರೇಲ್ ಯುದ್ಧ



**ಕೇ**ವಲ 9.3 ಕೋಟಿ ಜನಸಂಖ್ಯೆ ಹೊಂದಿರುವ ಪುಟ್ಟ ರಾಷ್ಟ್ರ ಇರಾನ್. ಈ ತೈಲ ಸವೃದ್ಧ ರಾಷ್ಟ್ರದ ಮೇಲೆ ಬಹಳ ಹಿಂದಿನಿಂದಲೂ ಜಗತ್ತಿನ 'ದೊಡ್ಡಣ್ಣ' ಎಂದೇ ಹೆಸರಾಗಿರುವ ಅಮೆರಿಕ, ತಂತ್ರಜ್ಞಾನ, ಶಸ್ತ್ರಾಸ್ತ್ರಗಳ ಸಾಮರ್ಥ್ಯದಲ್ಲಿ ಭಾರಿ ಪ್ರಗತಿ ಸಾಧಿಸಿರುವ ಇಸ್ರೇಲ್ ಕಣ್ಣು ನೆಟ್ಟಿದ್ದವು. ಅಷ್ಟೇ ಅಲ್ಲದೇ ನೆರೆಯ ಅರಬ್ ರಾಷ್ಟ್ರಗಳು ಕೂಡ ಇರಾನ್ ಅನ್ನು ಗುರಿ ಮಾಡುವ ಸಲುವಾಗಿ ದಶಕಗಳಿಂದ ಸಿದ್ಧತೆ ನಡೆಸಿದ್ದವು. ಅಮೆರಿಕದ ಸೇನಾನೆಲೆಗಳಿಗೆ ಸ್ಥಳ ಒದಗಿಸುವುದರ ಜತೆಗೆ ಅಮೆರಿಕದಿಂದ ಶಸ್ತ್ರಾಸ್ತ್ರಗಳನ್ನೂ ಖರೀದಿ ಮಾಡಿದ್ದವು.

ಅಮೆರಿಕ–ಇಸ್ರೇಲ್ ಫೆ.28ರಂದು ಇರಾನ್ ವಿರುದ್ಧ ದಿಢೀರ್ ದಾಳಿ ಆರಂಭಿಸಿದ್ದರೂ ಅದು ತೀರಾ ಅನಿರೀಕ್ಷಿತವೇನಲ್ಲ ಮೊದಲ ದಿನವೇ ಇರಾನ್ ತನ್ನ ಸರ್ವೋಚ್ಚ ನಾಯಕ ಅಯತೊಲ್ಲಾ ಖಮೇನಿ ಅವರನ್ನು ಕಳೆದುಕೊಂಡಿತು. ನಂತರದ ದಿನಗಳಲ್ಲಿ ಹಲವು ಹಿರಿಯ ಅಧಿಕಾರಿಗಳು ಹತರಾದರು. ಇರಾನ್ ಬಹುಬೇಗ ಶರಣಾಗಲಿದೆ ಎಂದು ವಿರೋಧಿ ಕೂಟ ಭಾವಿಸಿತ್ತು, ಅದರೆ, ಅವರ ಲೆಕ್ಕಾಚಾರ ತಲೆಕೆಳಗಾಗಿದೆ. ಇರಾನ್ ಮಾಡು ಇಲ್ಲವೇ ಮಡಿ ಎನ್ನುವಂತೆ ತೀವ್ರವಾದ ಹೋರಾಟದಲ್ಲಿ ತೊಡಗಿದೆ. ಇರಾನ್ ಮೇಲೆ ದಾಳಿ ಮಾಡುವಾಗ ಎಲ್ಲ ಅಂತರರಾಷ್ಟ್ರೀಯ ಕಾನೂನು ನೈತಿಕತೆ ಮೀರಿ ಶಾಲೆ, ಆಸ್ಪತ್ರೆ, ಜನವಸತಿ ಪ್ರದೇಶಗಳ ಮೇಲೆ ಅಮೆರಿಕ ಇಸ್ರೇಲ್ ದಾಳಿ ನಡೆಸಿವೆ.ಭಾರತದಲ್ಲಿ ನೌಕಾ ಸಮರಾಭ್ಯಾಸ ನಡೆಸಿ ಹೊರಟಿದ್ದ ಇರಾನ್ ಯುದ್ಧನೌಕೆಯನ್ನು ಶ್ರೀಲಂಕಾದ ಕರಾವಳಿಯಲ್ಲಿ ಅಂತರರಾಷ್ಟ್ರೀಯ ಜಲಮಾರ್ಗದಲ್ಲಿ ಹೊಡೆದುರುಳಿಸಲಾಗಿದೆ. ಯುದ್ಧದಿಂದಾಗಿ ಇರಾನ್‌ನಲ್ಲಿ ಇದುವರೆಗೆ ಸುಮಾರು 1,000ಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ ಎನ್ನಲಾಗುತ್ತಿದ್ದು, ಗಾಯಾಳುಗಳ ಸಂಖ್ಯೆಯೂ ದೊಡ್ಡದಿದೆ. ಆದರೆ, ಇರಾನ್, ತನ್ನ ನೆರೆಯ ಯುಎಇ, ಕುವೈತ್, ಸೌದಿ ಅರೇಬಿಯಾ, ಬಹರೇನ್, ಕತಾರ್, ಇರಾಕ್ ಮುಂತಾದ ಪಶ್ಚಿಮ ಏಷ್ಯಾದ ಮುಸ್ಲಿಂ ರಾಷ್ಟಗಳಲ್ಲಿರುವ ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ನಡೆಸುತ್ತಿದೆ. ಜತೆಗೆ, ಟೆಲ್ ಅವಿವ್ ಸೇರಿದಂತೆ ಇಸ್ರೇಲ್‌ನ ಹಲವು ಪ್ರದೇಶಗಳ ಮೇಲೆಯೂ ದಾಳಿ ಹೋಟೆಲ್‌ಗಳು, ವಿಮಾನ ನಿಲ್ದಾಣಗಳ ಮೇಲೆ ದಾಳಿ ನಡೆಸಿದೆ. ನ್ಯಾಟೊ ಸದಸ್ಯ ರಾಷ್ಟ್ರ ಟರ್ಕಿಯ ಮೇಲೂ ಕ್ಷಿಪಣಿ ಪ್ರಯೋಗ ಮಾಡಿದೆ.

ಇರಾನ್ ದಾಳಿಯಿಂದ ನೆರೆಯ ರಾಷ್ಟ್ರಗಳ ತೈಲ ಮೂಲಸೌಕರ್ಯಗಳಿಗೆ ಹಾನಿಯಾಗಿದ್ದು, ಪ್ರವಾಸೋದ್ಯಮಕ್ಕೆ ದೊಡ್ಡ ಪೆಟ್ಟು ಬಿದ್ದಿದೆ. ಅಮೆರಿಕ ಸೈನಿಕರ ಜತೆಗೆ ನಾಗರಿಕರೂ ಸಾವಿಗೀಡಾಗಿದ್ದಾರೆ.ವಿಮಾನ ನಿಲ್ದಾಣಗಳನ್ನು ಬಂದ್ ಮಾಡಲಾಗಿದೆ. ಶಾಲೆಗಳನ್ನು ಸ್ಥಳಾಂತರಿಸಲಾಗಿದೆ. ಮನೆ ಬಿಟ್ಟು ಹೊರಬರದಂತೆ ಜನರಿಗೆ ಎಚ್ಚರಿಕೆ ನೀಡಲಾಗಿದೆ. ಇರಾನ್‌ನ ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಯ ಬೆನ್ನಲ್ಲೇ ತೀವ್ರಗೊಂಡಿರುವ ಅಮೆರಿಕ ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವು ಸದ್ಯ ಲೆಬನಾನ್, ಸೈಪ್ರಸ್, ಟರ್ಕಿ, ಅಜರ್‌ಬೈಜಾನ್, ಶ್ರೀಲಂಕಾ ಕರಾವಳಿ ಸೇರಿ ಪಶ್ಚಿಮ ಏಷ್ಯಾ ದೇಶಗಳ ಗಡಿಯಾಚೆಗೂ ವಿಸ್ತರಿಸಿದ ಲಕ್ಷಣಗಳು ಕಂಡುಬಂದಿದೆ. ಯುದ್ಧದ ಸಂದರ್ಭದಲ್ಲಿ ಯಾವ ರೀತಿಯ ಪ್ರತಿರೋಧ ತೋರಬೇಕು ಎನ್ನುವುದರ ಬಗ್ಗೆ ಇರಾನ್ ವರ್ಷಗಟ್ಟಲೇ ನಡೆಸಿದ ಚಿಂತನೆ. ಮಾಡಿದ ತಾಲೀಮು ಇದರ ಹಿಂದಿದೆ. ವಿವಿಧ ಯುದ್ಧಗಳ ಸಂದರ್ಭದಲ್ಲಿ ಅಮೆರಿಕ ಯಾವ ದೇಶಗಳ ವಿರುದ್ಧ ಯಾವ ರೀತಿ ಸೋಲು ಕಂಡಿತ್ತು ಎನ್ನುವುದನ್ನು ಅಧ್ಯಯನ ಮಾಡಿ ಯುದ್ಧತಂತ್ರ ರೂಪಿಸಿರುವುದಾಗಿ ಇರಾನ್ ಹೇಳಿದೆ. ಇಸ್ರೇಲ್ ಸೇನೆ ಇರಾನ್ ವಿರುದ್ಧದ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದು, ಎರಡು ವಾರಗಳಿಂದ ನಡೆದ ಬಾಂಬುಗಳಲ್ಲಿ ಟೆಹರಾನ್‌ನಲ್ಲಿರುವ ಮೆಹರಾಬಾದ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮಿಂಚಿನ ದಾಳಿ ಮೂಲಕ ನಾಶಪಡಿಸಿರುವುದಾಗಿ ಇಸ್ರೇಲ್ ಮತ್ತು ಅಮೇರಿಕ ಹೇಳಿದೆ.

ಇರಾನ್ ವಿರುದ್ಧ ಯುದ್ಧ ಆರಂಭಗೊಂಡ ನಂತರ ಇಸ್ರೇಲ್ ನಡೆಸಿದ ಅತಿದೊಡ್ಡ ವೈಮಾನಿಕ ದಾಳಿ ಇದಾಗಿದೆ. ಟೆಹರಾನ್‌ನಲ್ಲಿರುವ ಮಿಲಿಟರಿ ಅಕಾಡೆಮಿ, ಭೂಗತ ಕಮಾಂಡ್ ಸೆಂಟರ್, ಕ್ಷಿಪಣಿ ಸಂಗ್ರಹ ಘಟಕವನ್ನು ಗುರಿಯಾಗಿಸಿ ಏಕಕಾಲದಲ್ಲಿ 80 ಯುದ್ಧ ವಿಮಾನಗಳ ಮೂಲಕ ದಾಳಿ ನಡೆದಿದೆ. ದಾಳಿಯ ಬೆನ್ನಲ್ಲೇ, ಟೆಹರಾನ್‌ನಲ್ಲಿ ಕ್ಷಿಪಣಿಗಳನ್ನು ಇರಿಸಿದ್ದ ಸ್ಥಳದಲ್ಲಿ ಭಾರಿ ಸ್ಫೋಟದ ಸದ್ದು ಕೇಳಿಬಂದಿದೆ. ಮಹರಾಬಾದ್ ವಿಮಾನ ನಿಲ್ದಾಣದಿಂದ ಹೊಗೆ ಮತ್ತು ಬೆಂಕಿ ಏಳುತ್ತಿರುವ ದೃಶ್ಯ ಕಂಡುಬಂದಿತು ಎಂದು ಸುದ್ದಿಸಂಸ್ಥೆ ವರದಿಮಾಡಿದೆ. ಇರಾನ್ ಕೂಡ ಪ್ರತೀಕಾರದ ದಾಳಿ ಮುಂದುವರಿಸಿರುವುದರಿಂದ ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಇನ್ನಷ್ಟು ವಿಷಮಗೊಂಡಿದೆ. ಜೆರುಸಲೇಂ, ದುಬೈ, ಬಹರೇನ್ ರಾಜಧಾನಿ ಮನಾಮ, ರಿಯಾದ್ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ನಿರಂತರ ಕ್ಷಿಪಣಿ ದಾಳಿ ಹಿನ್ನೆಲೆಯಲ್ಲಿ, ಎರಡು ವಾರದಿಂದ ದುಬೈ ಅಂತರರಾಷ್ಟ್ರೀಯ ವಿಮಾನ ಹಾರಾಟವನ್ನು ಕೆಲ ಸಮಯ ರದ್ದುಗೊಳಿಸಲಾಗಿದೆ. ಬೈರೂತ್ (ರಾಯಿಟರ್ಸ್): ಪೂರ್ವ ಲೆಬನಾನ್‌ನಲ್ಲಿ ಇಸ್ರೇಲ್ ಪಡೆ ನಡೆಸಿದ ದಾಳಿಯಲ್ಲಿ ಲೆಬನಾನ್‌ನ ಮೂವರು ಸೈನಿಕರು ಸೇರಿದಂತೆ 41 ಮಂದಿ ಸಾವಿಗೀಡಾಗಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ಶನಿವಾರ ತಿಳಿಸಿದೆ. ಪೂರ್ವ ಲೆಬನಾನ್‌ನಲ್ಲಿ ಇಸ್ರೇಲ್ ಪಡೆ ನಡೆಸಿದ ದಾಳಿಯಲ್ಲಿ ಲೆಬನಾನ್‌ನ ಮೂವರು ಸೈನಿಕರು ಸೇರಿದಂತೆ 41 ಮಂದಿ ಸಾವಿಗೀಡಾಗಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ತಿಳಿಸಿದೆ. ನಬಿ ಶೀತ್ ಹಾಗೂ ಸುತ್ತಲಿನ ಪ್ರದೇಶ ಗಳಲ್ಲಿ ನಡೆದ ದಾಳಿಯಲ್ಲಿ 40 ಮಂದಿ ಗಾಯಗೊಂಡಿದ್ದಾರೆ ಎಂದು ಅದು ಹೇಳಿಕೆಯಲ್ಲಿ ತಿಳಿಸಿದೆ. ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ಈವರೆಗೆ 200ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದು, 3 ಲಕ್ಷಕ್ಕೂ ಅಧಿಕ ಮಂದಿಯನ್ನು ಸರ್ಕಾರಿ ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.

# 33 ಸಾವಿರ ಕೋಟಿ ಯೋಜನೆಗಳಿಗೆ ಮೋದಿ ಶಂಕು ಸ್ಥಾಪನೆ

**ನ**ವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯ ಎರಡು ಪ್ರಮುಖ ದೆಹಲಿ ಮೆಟ್ರೋ ಕಾರಿಡಾರ್ ಸೇರಿದಂತೆ ಸುಮಾರು 33,500 ಕೋಟಿ ಮೌಲ್ಯದ ಇತರ ಪ್ರಮುಖ ಅಭಿವೃದ್ಧಿಗಳ ಜೊತೆಗೆ ಮೂರು ಪ್ರಮುಖ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಶಂಕುಸ್ಥಾಪನೆ ನೆರವೇರಿಸಿದ್ದಾರೆ.

ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಘೋಷಿಸಿದ ಮಹತ್ವಾಕಾಂಕ್ಷೆಯ ಉಪಕ್ರಮ, ರಾಷ್ಟ್ರ ರಾಜಧಾನಿ ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶದದ್ಯಂತ ವೇಗವಾದ ಸಂಪರ್ಕ, ಮಾಲಿನ್ಯವನ್ನು ಕಡಿಮೆ ಮಾಡುವುದು ಮತ್ತು ಸಾರ್ವಜನಿಕ ಸಾರಿಗೆ ಸ್ವಚ್ಛಗೊಳಿಸಲು ಉತ್ತೇಜನ ನೀಡಲಿದೆ.

ಸರೋಜಿನಿ ನಗರದಲ್ಲಿರುವ ಜನರಲ್ ಪೂಲ್ ರೆಸಿಡೆನ್ಶಿಯಲ್ ಅಕಾಮಡೇಷನ್ ಟೈಪ್–5 ಕ್ವಾರ್ಟರ್ಸ್‌ಗೆ ಭೇಟಿ ನೀಡಿ ಮಹಿಳಾ ಹಂಚಿಕೆದಾರರಿಗೆ ಕೀಗಳನ್ನು ವೈಯಕ್ತಿಕವಾಗಿ ಹಸ್ತಾಂತರಿಸಿದರು. ಸಾರ್ವಜನಿಕ ಸೇವಕರಿಗೆ ಆಧುನಿಕ ಜೀವನಕ್ಕೆ ಸರ್ಕಾರದ ಬದ್ಧತೆಯ ಸಂಕೇತ ವಾಗಿದೆ.

ದೆಹಲಿಯ ಮೆಟ್ರೋದ ಪಿಂಕ್ ಲೈನ್‌ನಲ್ಲಿ 12.3–ಕಿಮೀ ಮಜ್ಲಿಸ್ ಪಾರ್ಕ್ –ಮೌಜ್‌ಪುರ್–ಬಾಬರ್‌ಪುರ್ ಕಾರಿಡಾರ್ ಮತ್ತು ಮೆಜೆಂಟಾ ಲೈನ್‌ನಲ್ಲಿ 9.9–ಕಿಮೀ ದೀಪಾಲಿ ಚೌಕ್–ಮಜ್ಲಿಸ್ ಪಾರ್ಕ್ ವಿಸ್ತರ ಣೆಯ ಕಾರ್ಯಾಚರಣೆ ಒಳಗೊಂಡಿದೆ. ಬುರಾರಿ, ಜಗತ್ಪುರ್–ವಜೀರಾಬಾದ್, ಖಜುರಿ ಖಾಸ್, ಭಜನ್‌ಪುರ ಮತ್ತು ಯಮುನಾ ವಿಹಾನ್‌ನಂತಹ ಪ್ರದೇಶಗಳಿಗೆ ಸೇವೆ ಸಲ್ಲಿಸುವ ಪಿಂಕ್ ಲೈನ್ ಮಾರ್ಗ ಸುಮಾರು 71.56 ಕಿ.ಮೀ.ಗಳಲ್ಲಿ ಪೂರ್ಣ ಗೊಳ್ಳಲಿದ್ದು, ದೆಹಲಿ ಸಂಪೂರ್ಣವಾಗಿ ಕಾರ್ಯನಿರ್ವಹಿಸುವ "ರಿಂಗ್ ಮೆಟ್ರೋ" ಹೊಂದಿರುವ ಭಾರತದ ಮೊದಲ ನಗರವಾಗಿದೆ.

ಈಶಾನ್ಯ ಮತ್ತು ವಾಯುವ್ಯ ದೆಹಲಿ ನಡುವಿನ ಪ್ರಯಾಣದ ಸಮಯ ಕಡಿಮೆ ಮಾಡುತ್ತದೆ, ಜೊತೆಗೆ ಸಂಚಾರ ದಟ್ಟಣೆ ಕಡಿಮೆ ಮಾಡುತ್ತದೆ ಮತ್ತು ಕೊನೆಯ ಮೈಲಿ ಸಂಪರ್ಕ ಹೆಚ್ಚಿಸುತ್ತದೆ.

ಈ ನಡುವೆ ಮೆಜೆಂಟಾ ಲೈನ್ ವಿಸ್ತರಣೆ ಜಾಲವನ್ನು ಸುಮಾರು 49 ಕಿ.ಮೀ.ಗೆ ವಿಸ್ತರಿಸುತ್ತದೆ, ಮಧುಬನ್ ಚೌಕ್, ಉತ್ತರ ಪಿತಂಪುರಾ–ಪ್ರಶಾಂತ್ ವಿಹಾರ್, ಹೈದರ್ಪುರ್ ಬದ್ಲಿ ಮೋರ್ ಮತ್ತು ಭಾಲಸ್ವಾ ಮುಂತಾದ ವಸತಿ ಕೇಂದ್ರಗಳನ್ನು ಸಂಪರ್ಕಿಸುತ್ತದೆ.

ಈ ಸೇರ್ಪಡೆಗಳು ವಾಣಿಜ್ಯ ಮತ್ತು ವಸತಿ ವಲಯಗಳನ್ನು ಹೇಗೆ ಸಂಯೋಜಿಸುತ್ತವೆ, ಸುಗಮ, ಪರಿಸರ ಸ್ನೇಹಿ ಪ್ರಯಾಣವನ್ನು ಉತ್ತೇಜಿಸುತ್ತವೆ ಮತ್ತು ಖಾಸಗಿ ವಾಹನಗಳ ಮೇಲಿನ



ಅವಲಂಬನೆ ಕಡಿತಗೊಳಿಸುತ್ತವೆ.

ಒಟ್ಟು 16.1 ಕಿ.ಮೀ. ಇವುಗಳಲ್ಲಿ ಉತ್ತಮ ಆಡಳಿತಾತ್ಮಕ ಪ್ರವೇಶಕ್ಕಾಗಿ ರಾಮಕೃಷ್ಣ ಆಶ್ರಮ ಮಾರ್ಗ–ಇಂದ್ರ ಪ್ರಸ್ಥ ಸೆಂಟ್ರಲ್ ವಿಸ್ಟಾ ಕಾರಿಡಾರ್, ತ್ವರಿತ ವಿಮಾನ ನಿಲ್ದಾಣ ಸಂಪರ್ಕ ಕ್ಕಾಗಿ ಏರೋಸಿಟಿ–ಇಂದಿರಾ ಗಾಂಧಿ ವಿಮಾನ ನಿಲ್ದಾಣ ಟರ್ಮಿನಲ್–1 ಮಾರ್ಗ ಮತ್ತು ದಕ್ಷಿಣ ದೆಹಲಿಯನ್ನು ಸಂಪರ್ಕಿಸಲು ಸಹಕಾರಿಯಾಗಿದೆ.

ಫರಿದಾಬಾದ್ ಮತ್ತು ಬಲ್ಲಭ ಗಢದ ಪ್ರಯಾಣಿಕರು ಶೀಘ್ರದಲ್ಲೇ ವಯಲೆಟ್ ಲೈನ್ ಮೂಲಕ ತುಘಲಕಾಬಾದ್‌ಗೆ ಮತ್ತು ಗೋಲ್ಡನ್ ಲೈನ್ ಮೂಲಕ ವಿಮಾನ ನಿಲ್ದಾಣಕ್ಕೆ ತೆರಳಲು ಸಹಕಾರಿಯಾಗಿದೆ.

# ಪಂಚರಾಜ್ಯಗಳ ಚುನಾವಣೆ ಘೋಷಣೆ

**ನ**ವದೆಹಲಿ: ಭಾರತದ ಚುನಾವಣಾ ಆಯೋಗ ಏಪ್ರಿಲ್ 2026ರಲ್ಲಿ ನಡೆಯಲಿರುವ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯನ್ನು ಘೋಷಿಸಿದ್ದು, ರಾಜಕೀಯ ವಲಯದಲ್ಲಿ ಚಟುವಟಿಕೆಗಳು ತೀವ್ರಗೊಂಡಿವೆ. ಈ ಬಾರಿ ಚುನಾವಣೆ ನಡೆಯಲಿರುವ ರಾಜ್ಯಗಳು: ಅಸ್ಸಾಂ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಹಾಗೂ ಪುದುಚೇರಿ.

ಪ್ರಮುಖವಾಗಿ Bharatiya Janata Party ಮತ್ತು Indian National Congres ರಾಷ್ಟ್ರೀಯ ಮಟ್ಟದಲ್ಲಿ ಪೈಪೋಟಿ ನಡೆಸುತ್ತಿದ್ದರೆ, ಕೆಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ತಮ್ಮದೇ ಬಲ ಪ್ರದರ್ಶಿಸುತ್ತಿವೆ. ತಮಿಳುನಾಡಿನಲ್ಲಿ Dravida Munnetra Kazhagam–AIADMK ನಡುವೆ ಸ್ಪರ್ಧೆ, ಪಶ್ಚಿಮ ಬಂಗಾಳದಲ್ಲಿ All India Trinamool Congress–BJP ಪೈಪೋಟಿ, ಕೇರಳದಲ್ಲಿ LDF–UDF ನಡುವಿನ ಸಾಂಪ್ರದಾಯಿಕ ಹೋರಾಟ ಗಮನ ಸೆಳೆಯುತ್ತಿದೆ. ಈ ಚುನಾವಣೆಗಳು ದೇಶದ ಮುಂದಿನ ರಾಜಕೀಯ ದಿಕ್ಕು ನಿರ್ಧರಿಸುವ ಮಹತ್ವದ ಹಂತವೆಂದು ಪರಿಗಣಿಸಲಾಗುತ್ತಿದ್ದು, ಮತದಾರರ ತೀರ್ಮಾನವು ರಾಷ್ಟ್ರೀಯ ರಾಜಕೀಯ ಸಮೀಕರಣಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಭಾರತದ ಚುನಾವಣಾ ಆಯೋಗ ಏಪ್ರಿಲ್ 2026ರಲ್ಲಿ ನಡೆಯಲಿರುವ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ವೇಳಾಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದೆ. ಇದರೊಂದಿಗೆ ಸಂಬಂಧಿತ ರಾಜ್ಯಗಳಲ್ಲಿ ಮಾದರಿ ನಡೆ ನಿಯಮಾವಳಿ (Model Code of Conduct) ತಕ್ಷಣದಿಂದಲೇ ಜಾರಿಗೆ ಬಂದಿದೆ.

**ಮತದಾನ ದಿನಾಂಕಗಳು**

ಏಪ್ರಿಲ್ 9, 2026: ಅಸ್ಸಾಂ, ಕೇರಳ, ಪುದುಚೇರಿ ಚುನಾವಣೆ ದಿನಾಂಕ.


ಏಪ್ರಿಲ್ 23, 2026: ತಮಿಳುನಾಡು, ಪಶ್ಚಿಮ ಬಂಗಾಳ (ಮೊದಲ ಹಂತ)

ಏಪ್ರಿಲ್ 29, 2026: ಪಶ್ಚಿಮ ಬಂಗಾಳ (ಎರಡನೇ ಹಂತ)

ಮತ ಎಣಿಕೆ: ಮೇ 4, 2026 ರಂದು ನಡೆಸಲು ನಿರ್ಧರಿಸಲಾಗಿದೆ.

ಐದು ರಾಜ್ಯಗಳಲ್ಲಿ ಒಟ್ಟು ನೂರಾರು ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. ಮತದಾನಕ್ಕೆ ಇಗಿಬ ಹಾಗೂ VVPAT ಯಂತ್ರಗಳನ್ನು ಬಳಸಲಾಗುತ್ತದೆ. ಭದ್ರತಾ ದೃಷ್ಟಿಯಿಂದ ಬಹು



ಹಂತಗಳಲ್ಲಿ ಮತದಾನ ವ್ಯವಸ್ಥೆ. ಚುನಾವಣಾ ಆಯೋಗದಿಂದ ಕಟ್ಟುನಿಟ್ಟಿನ ಮಾರ್ಗಸೂಚಿಗಳು ಜಾರಿಗೆ. ಪಶ್ಚಿಮ ಬಂಗಾಳದಲ್ಲಿ ಪ್ರಬಲ ಪೈಪೋಟಿ. ತಮಿಳುನಾಡಿನಲ್ಲಿ ಮೈತ್ರಿ ರಾಜಕೀಯ ಕಸರತ್ತು. ಕೇರಳದಲ್ಲಿ ಪರಂಪರ ಎದುರಾಳಿಗಳ ನಡುವೆ ಸ್ಪರ್ಧೆ.

ಈ ಚುನಾವಣೆಗಳು ದೇಶದ ರಾಜಕೀಯದಲ್ಲಿ ಮಹತ್ವದ ಘಟ್ಟವಾಗಿದ್ದು, ಮುಂದಿನ ರಾಷ್ಟ್ರೀಯ ರಾಜಕೀಯ ಸಮೀಕರಣಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

# ಭಾರತದ ಆರ್ಥಿಕ ರಾಜಧಾನಿ ಮುಂಬೈ ಬಜೆಟ್ 80 ಸಾವಿರ ಕೋಟಿ



**ಭಾ**ರತದ ಪಶ್ಚಿಮ ಕರಾವಳಿಯಲ್ಲಿ ಅರಬ್ಬೀ ಸಮುದ್ರದ ತೀರದಲ್ಲಿ ಬೆಳೆಯುತ್ತಿರುವ ಮಹಾನಗರ Mumbai (ಹಳೆಯ ಹೆಸರು ಬಾಂಬೆ) ದೇಶದ ಆರ್ಥಿಕ ರಾಜಧಾನಿಯಾಗಿ ವಿಶ್ವದ ಗಮನ ಸೆಳೆದಿದೆ. ಜನಸಂಚಾರ, ವ್ಯಾಪಾರ, ಸಂಸ್ಕೃತಿ ಮತ್ತು ಚಲನಚಿತ್ರ ಕ್ಷೇತ್ರಗಳ ಸಮನ್ವಯದಿಂದ ಈ ನಗರವು "ನಿದ್ರೆ ಮಾಡದ ನಗರ" ಎಂದು ಪ್ರಸಿದ್ಧವಾಗಿದೆ.

ಮುಂಬೈ ಮೂಲತಃ ಏಳು ದ್ವೀಪಗಳ ಸಮೂಹವಾಗಿದ್ದು, ಪೋರ್ಚುಗೀಸ್ ಮತ್ತು ನಂತರ ಬ್ರಿಟಿಷರ ಆಳ್ವಿಕೆಯಲ್ಲಿ ಪ್ರಮುಖ ಬಂದರಾಗಿ ಅಭಿವೃದ್ಧಿಯಾಯಿತು. 1995ರಲ್ಲಿ ಬಾಂಬೆ ಎಂಬ ಹೆಸರನ್ನು ಅಧಿಕೃತವಾಗಿ ಮುಂಬೈ ಎಂದು ಪರಿವರ್ತಿಸಲಾಯಿತು. ಭಾರತದ ಹಣಕಾಸು ಚಟುವಟಿಕೆಗಳ ಹೃದಯಭಾಗವೆಂದರೆ ಮುಂಬೈ. ದೇಶದ ಪ್ರಮುಖ ಬ್ಯಾಂಕುಗಳು ಮತ್ತು ಷೇರು ಮಾರು ಕಟ್ಟೆಗಳು ಇಲ್ಲಿಯೇ ಕಾರ್ಯ ನಿರ್ವಹಿಸುತ್ತವೆ. Reserve Bank of India, Bombay Stock Exchange ಮತ್ತು National Stock Exchange ಮುಂತಾದ ಸಂಸ್ಥೆಗಳು ಭಾರತದ ಆರ್ಥಿಕತೆಯನ್ನು ನಿಯಂತ್ರಿಸುವ ಪ್ರಮುಖ ಕೇಂದ್ರಗಳಾಗಿವೆ. ಮುಂಬೈ ಭಾರತೀಯ ಹಿಂದಿ ಚಲನಚಿತ್ರರಂಗದ ಹೃದಯವಾಗಿದೆ. ಬಾಲಿವುಡ್ ಎಂದೇ ಖ್ಯಾತಿ ಪಡೆದಿರುವ ಈ ಕ್ಷೇತ್ರದಲ್ಲಿ Amitabh Bachchan ಮತ್ತು Shah Rukh Khan ಮೊದಲಾದ ನಟರು ಜಾಗತಿಕ ಖ್ಯಾತಿಯನ್ನು ಗಳಿಸಿದ್ದಾರೆ.

ದೇಶದ ಅತ್ಯಂತ ಶ್ರೀಮಂತ ಸ್ಥಳೀಯಾಡಳಿತ ಸಂಸ್ಥೆಯಾಗಿ ಹೆಸರಾಗಿರುವ ಮುಂಬೈ ಮಹಾನಗರ ಪಾಲಿಕೆಯ ಬಜೆಟ್ ಗಾತ್ರವು 2026–27ನೇ ಸಾಲಿನಲ್ಲಿ ರೂ.80 ಸಾವಿರ ಕೋಟಿ ದಾಟಲಿದೆ. ಮುಂಬೈ ಪಾಲಿಕೆಯ 227 ಸ್ಥಾನಗಳಿಗೆ ಚುನಾವಣೆ ನಡೆದ ಒಂದು ತಿಂಗಳ ನಂತರ ಪಾಲಿಕೆ ಆಯುಕ್ತ ಭೂಷಣ್ ಗಾನಿ ಅವರು ಬುಧವಾರ 2026–27ನೇ ಸಾಲಿನ ಬಜೆಟ್ ಮಂಡಿಸಿದರು. ಬೃಹನ್ಮುಂಬಯಿ ಮಹಾನಗರ ಪಾಲಿಕೆಯ ಬಜೆಟ್ ಮಂಡನೆಗೂ ಮುನ್ನ ಪಾಲಿಕೆ ಆಯುಕ್ತ ಭೂಷಣ್ ಗ್ಯಾನಿ (ಬಲಭಾಗ) ಹಾಗೂ ಬಿಎಂಪಿ ಸ್ಥಾಯಿಸಮಿತಿ ಅಧ್ಯಕ್ಷ ಪ್ರಭಾಕರ್ ಶಿಂದೆ ಅವರು ಬಜೆಟ್ ಪ್ರತಿಗಳನ್ನು ಪ್ರದರ್ಶಿಸಿದರು. ಈ ಸಲದ ಬಜೆಟ್ ಮೀರಲಿದ್ದು, 2025–26ಕ್ಕೆ ಗಾತ್ರವು ರೂ.80,952.56 ಕೋಟಿ ಹೋಲಿಸಿದರೆ (ರೂ.74,427.41 ಕೋಟಿ) ಶೇಕಡ 8.77 ರಷ್ಟು ಏರಿಕೆಯಾಗಿದೆ" ಎಂದು ತಿಳಿಸಿದ್ದಾರೆ.

ಬೃಹನ್ ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ)ಯ ಬಜೆಟ್ ಗಾತ್ರವು ದೇಶದ ಕೆಲವು ರಾಜ್ಯಗಳ ಬಜೆಟ್ ಗಾತ್ರವನ್ನು ಮೀರಿಸಲಿದೆ. ಬಿಎಂಸಿ ಬಜೆಟ್ ಗಾತ್ರವು ದೇಶದ ಹಲವು ಸಣ್ಣ ರಾಜ್ಯಗಳಿಗಿಂತಲೂ ಹೆಚ್ಚಿದೆ. ಮಿಜೋರಾಂ (ರೂ.15.043 ಕೋಟಿ), ಸಿಕ್ಕಿಂ (ರೂ.16,196 ಕೋಟಿ), ನಾಗಾಲ್ಯಾಂಡ್ (ರೂ.24,699 ಕೋಟಿ), ಮಣಿಪುರ (ರೂ.29,988 ಕೋಟಿ), ಮೇಘಾಲಯ (ರೂ.30,003 ಕೋಟಿ), ತ್ರಿಪುರಾ (ರೂ.32,423 ಕೋಟಿ), ಅರುಣಾಚಲಪ್ರದೇಶ (ರೂ.39,842 ಕೋಟಿ) ನಷ್ಟಿದೆ. ಗೋವಾ (ರೂ.28,162 ಕೋಟಿ), ಹಿಮಾಚಲ ಪ್ರದೇಶ (ರೂ.58.514 ಕೋಟಿ) ರಾಜ್ಯಕ್ಕಿಂತಲೂ ಬಿಎಂಸಿ ಬಜೆಟ್ ಗಾತ್ರ ಹೆಚ್ಚಿದೆ. ಈ ಬಜೆಟ್‌ನಲ್ಲಿ ಪ್ರಮುಖವಾಗಿ ರಸ್ತೆ, ಸೇತುವೆ, ಕರಾವಳಿ ರಸ್ತೆ ಯೋಜನೆಗಳು ಮತ್ತು ಸಂಪರ್ಕ ಮಾರ್ಗಗಳ ಅಭಿವೃದ್ಧಿಗೆ ಹೆಚ್ಚಿನ ಹಣ ಮೀಸಲಿರಿಸಲಾಗಿದೆ. ನಗರದ ನೀರಿನ ಸಮಸ್ಯೆ ನಿವಾರಣೆಗೆ ರೂ. 6,000 ಕೋಟಿಗೂ ಹೆಚ್ಚು ಹಣವನ್ನು ಮೀಸಲಿಟ್ಟು, ಹೊಸ ಅಣೆಕಟ್ಟುಗಳು ಮತ್ತು ಡಿಸಾಲಿನೇಶನ್ ಘಟಕಗಳ ಯೋಜನೆಗೆ ಉತ್ತೇಜನ ನೀಡಲಾಗಿದೆ. ಗೋರೆಗಾಂವ್–ಮುಲುಂಡ್ ಸಂಪರ್ಕ ಮಾರ್ಗ (GMLR) ಸೇರಿದಂತೆ ಮಹತ್ವದ ಯೋಜನೆಗಳು ಮುಂದುವರಿಯಲಿವೆ. ನಗರದ ಸರ್ಕಾರಿ ಆಸ್ಪತ್ರೆಗಳನ್ನು ಆಧುನೀಕರಿಸಲು ಮತ್ತು ಹೊಸ ವೈದ್ಯಕೀಯ ಸಾಧನಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ರೂ. 4,248 ಕೋಟಿ ಮೀಸಲಿದ್ದು, ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್‌ಗಳು, ಎಐ (AI) ಪ್ರಯೋಗಾಲಯಗಳು ಹಾಗೂ ಇಂಗ್ಲಿಷ್ ಕಲಿಕಾ ಕೇಂದ್ರಗಳನ್ನು ಆರಂಭಿಸುವ ಯೋಜನೆ ಇದೆ.

ಭಾರತದ ಆರ್ಥಿಕ ಶಕ್ತಿ, ಸಂಸ್ಕೃತಿಯ ವೈವಿಧ್ಯತೆ ಮತ್ತು ಅಂತರಾಷ್ಟ್ರೀಯ ಸಂಪರ್ಕಗಳ ಸಂಕೇತವಾಗಿರುವ ಮುಂಬೈ, ದೇಶದ ಅಭಿವೃದ್ಧಿಯ ಪ್ರಮುಖ ಚಾಲಕವಾಗಿದೆ. ಸವಾಲುಗಳ ನಡುವೆಯೂ ನಿರಂತರ ಬೆಳವಣಿಗೆ ಕಂಡು ಬರುತ್ತಿರುವ ಈ ಮಹಾನಗರವು ಭವಿಷ್ಯದ ಭಾರತಕ್ಕೆ ದಿಕ್ಕು ತೋರಿಸುವ ಕೇಂದ್ರವಾಗಿ ಉಳಿದಿದೆ.

# ಮಲೆನಾಡಿನಲ್ಲಿ 450 ಎಕರೆ ಸರ್ಕಾರಿ ಭೂಮಿ ಕಬಳಿಕೆ



**ನ**ಕಲಿ ಸಾಗುವಳಿ ಚೀಟಿ, ಮ್ಯುಟೇಷನ್ ಸೃಷ್ಟಿಸಿ ರೆಕಾರ್ಡ್ ರೂಂ ಕಡತದಲ್ಲಿ ಸೇರಿಸುವ ಮೂಲಕ 450 ಎಕರೆ ಸರ್ಕಾರಿ ಭೂಮಿ ಕಬಳಿಸಿರುವುದು ಪತ್ತೆಯಾಗಿದ್ದು, ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. 1996 2015 ಯಲ್ಲಿ 10 ಗುಂಟೆಯಿಂದ 4 ಎಕರೆ ತನಕ 147 ಜನರಿಗೆ ಭೂ ಮಂಜೂರಾತಿ ಆಗಿದೆ ಎಂಬಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಅಲ್ಲದೇ ಅಷ್ಟೂ ಮ್ಯುಟೇಷನ್ ಮತ್ತು ಕೈ ಬರಹದ ಪಹಣಿಗಳನ್ನು ತರೀಕೆರೆಯ ಸರ್ಕಾರಿ ಅಭಿಲೇಖಾಲಯದ ಪಟ್ಟಿಗೆ ಅನಧಿಕೃತವಾಗಿ ಸೇರ್ಪಡೆ ಮಾಡಲಾಗಿದೆ. ಒಟ್ಟಾರೆ 450 ಎಕರೆ 23 ಗುಂಟೆ ಕಬಳಿಸಲಾಗಿದೆ ಎಂದು ತಹಶೀಲ್ದಾರ್ ನೇತೃತ್ವದ ತನಿಖಾ ತಂಡ ವರದಿ ಮಾಡಿದೆ.

ನಾಗೇನಹಳ್ಳಿ, ಸಂತೇದಿಬ್ಬದ ಕಾವಲು, ಶಿವಪುರ, ಕೆ.ಚಟ್ನಹಳ್ಳಿ, ನೇರಲೆಕೆರೆ, ಮುಂಡನಹಳ್ಳಿ, ಎ.ಗೊಲ್ಲರಹಳ್ಳಿ, ಸಾವೆ ಮರಡಿಕಾವಲು, ಗುಂಡೇನಹಳ್ಳಿ, ಅರಸೀಕೆರೆ ಗ್ರಾಮಗಳಿಗೆ ಸಂಬಂಧಿಸಿದ ಮ್ಯೂಟೇಷನ್ ಪುಸ್ತಕಗಳೇ ಕಚೇರಿಯಲ್ಲಿ ಲಭ್ಯ ಇಲ್ಲದಿರುವು ದನ್ನೂ ತನಿಖಾ ವರದಿಯಲ್ಲಿ ಉಲ್ಲೇಖಿಸ ಲಾಗಿದೆ. ಪುಸ್ತಕ ಲಭ್ಯವಿಲ್ಲದಿರುವುದರಿಂದ ಆ ಗ್ರಾಮಗಳ ಸಾಗುವಳಿ ಚೀಟಿಗಳ ನೈಜತೆ ಪರಿಶೀಲನೆ ಸಾಧ್ಯವಾಗಿಲ್ಲ. 147 ಪ್ರಕರಣಗಳಲ್ಲಿ ಕೇವಲ ಕೈ ಬರಹದ ಮ್ಯುಟೇಷನ್‌ಗಳಾಗಿದ್ದು, ನಂತರದಲ್ಲಿ ಡಿಜಿಟಲ್ ಆರ್‌ಟಿಸಿಯಲ್ಲಿ ನಮೂದಾಗಿಲ್ಲ.

26 ವರ್ಷಗಳ ನಂತರವೂ ಇಷ್ಟು ಮ್ಯುಟೇಷನ್‌ಗಳು ಡಿಜಿಟಲ್ ಆರ್‌ಟಿಸಿಯಲ್ಲಿ ನಮೂದಾಗದಿರುವುದು ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ. ಸರ್ಕಾರಿ ಜಾಗ ಕಬಳಿಸಲು ಅನಧಿಕೃತವಾಗಿ ಸೃಷ್ಟಿಸಿ ಕಚೇರಿಯ ರೆಕಾರ್ಡ್ ರೂಂ ಕಡತಗಳಲ್ಲಿ ಸೇರಿಸಲಾಗಿದೆ ಎಂದು ತಂಡ ಶಂಕಿಸಿದೆ.

ನಕಲಿ ದಾಖಲೆಗಳನ್ನು ಕಡತಗಳಲ್ಲಿ ಸೇರಿಸುವಲ್ಲಿ ಕಚೇರಿಯ ಸಿಬ್ಬಂದಿ ಮತ್ತಿತರರ ಕೈವಾಡವಿರುವ ಶಂಕೆ ಇದೆ. ವಿಚಾರಣೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ತರೀಕೆರೆ ಠಾಣೆಗೆ ತಹಶೀಲ್ದಾರ್ ದೂರು ನೀಡಿದ್ದು, ಬುಧವಾರ ಎಫ್‌ಐಆರ್ ದಾಖಲಾಗಿದೆ.

ಸಾಗುವಳಿ ಚೀಟಿಯೊಂದಿಗೆ ಕೆಲವರು ಹೈಕೋರ್ಟ್ ಮೊರೆ ಹೋಗಿದ್ದು, ನ್ಯಾಯಾಲಯಕ್ಕೆ ದಾಖಲೆ ಒದಗಿಸಲು ತರೀಕೆರೆ ರೆಕಾರ್ಡ್ ರೂಂನಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಆ ಸಂಖ್ಯೆಯ ದಾಖಲೆಗಳು ಪತ್ತೆಯಾಗಿಲ್ಲ.

ನ್ಯಾಯಾಲಯಕ್ಕೆ ಸಲ್ಲಿಕೆಯಾಗಿರುವ ಸಾಗುವಳಿ ಚೀಟಿಗಳಲ್ಲಿ ನಮೂದಾಗಿರುವ ಸಂಖ್ಯೆಯನ್ನು ಗಮನಿಸಿದರೆ ಅದು ಬೇರೆ ಊರಿನಲ್ಲಿ ನೀಡಿರುವ ಸಾಗುವಳಿ ಚೀಟಿಯಾಗಿದೆ. ಮನಸ್ಸಿಗೆ ಬಂದಂತೆ ಸಾಗುವಳಿ ಚೀಟಿ ಸಂಖ್ಯೆ ನೀಡಿ ನಕಲಿಯಾಗಿ ಸೃಷ್ಟಿಸಿ ಹಂಚಿಕೆ ಮಾಡಲಾಗಿದೆ ಎಂದು ದೂರಲಾಗಿತ್ತು.

ಈ ಜಾಡು ಹಿಡಿದು ಅಷ್ಟೂ ದಾಖಲೆಗಳನ್ನು ತಹಶೀಲ್ದಾರ್ ವಿನಾಯಕ ಸಾಗರ್ ನೇತೃತ್ವದ ತನಿಖಾ ತಂಡ ಪರಿಶೀಲನೆ ನಡೆಸಿದೆ. ಈ ಸಂದರ್ಭದಲ್ಲಿ 147 ಪ್ರಕರಣಗಳಲ್ಲಿ ಮ್ಯುಟೇಷನ್‌ಗಳು ಮತ್ತು ಕೈಬರಹದ ಪಹಣಿಗಳನ್ನು ರೆಕಾರ್ಡ್ ರೂಂ ಕಡತಗಳಲ್ಲಿ ಸೇರ್ಪಡೆ ಮಾಡಿರುವುದು ಗೊತ್ತಾಗಿದೆ. ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ್ದ ತಹಶೀಲ್ದಾರ್, ಕಂದಾಯ ಅಧಿಕಾರಿ, ಗ್ರಾಮ ಲೆಕ್ಕಾಧಿಕಾರಿ ಸಹಿಗಳು ಬೇರೆ ಬೇರೆ ಕಡತಗಳಲ್ಲಿ ಹುಡುಕಿ ತಾಳೆ ಹಾಕಲಾಗಿದೆ. ಆದರೆ, ಸಹಿಗಳು ತಾಳೆಯಾಗುತ್ತಿಲ್ಲ.

ತರೀಕೆರೆ ತಾಲ್ಲೂಕಿನ ಸಿದ್ದರಹಳ್ಳಿ, ಹುರುಳಿಹಳ್ಳಿ, ತಾಲ್ಲೂಕಿನ ದೋರನಾಳು, ಯರೇಬೈಲು, ಮಳಲಿಚನ್ನೇನಹಳ್ಳಿ, ಜೋಡಿಕೋಡಿಹಳ್ಳಿ, ಎಚ್.ತಿಮ್ಮಾಪುರ, ಯಲುಗೆರೆ, ಎಚ್. ರಂಗಾಪುರ, ಹಿರೇಕಾತೂರು, ಹೊಸಹಳ್ಳಿ, ಮುಂಡ್ರೆ, ಲಕ್ಕವಳ್ಳಿ ಹೋಬಳಿಯ ಗುರುಪುರ, ಶಾಂತಿಪುರ, ಗುಡ್ಡದಬೀರನಹಳ್ಳಿ, ಕರಕುಚ್ಚಿ, ಹಿರಿಗಾಪುರ. ವಡ್ಡರದಿಬ್ಬ, ಗೋಪಾಲ ಗ್ರಾಮಗಳ ಸರ್ಕಾರಿ ಸಂಬಂಧಿಸಿದ ಅಕ್ರಮ ಮ್ಯುಟೇಷನ್‌ಗಳು ಸೃಷ್ಟಿಯಾಗಿವೆ ಎಂಬುದನ್ನು ತನಿಖಾ ತಂಡ ಪಟ್ಟಿ ಮಾಡಿದೆ. ಎಚ್. ತಿಮ್ಮಾಪುರ, ಶಾಂತಿಪುರ ಮತ್ತು ಗುಡ್ಡದಬೀರನಹಳ್ಳಿ ಗ್ರಾಮಗಳ ಸರ್ವೆ ನಂಬರ್ ಗಳಲ್ಲೇ ಹೆಚ್ಚು ಅಕ್ರಮ ಮ್ಯುಟೇಷನ್‌ಗಳು ಸೃಷ್ಟಿಯಾಗಿವೆ ಎಂಬುದನ್ನು ತನಿಖಾ ವರದಿ ಹೇಳುತ್ತದೆ.

# ಭಾರತದಲ್ಲಿ ವಾಹನ ಸಾಲ ತೀರಿದ ಕೂಡಲೇ ಹೈಪೊಥಿಕೇಷನ್ ಸ್ವಯಂ ರದ್ದು

**ಭಾ**ರತದಲ್ಲಿ ಕಾರ್ ಅಥವಾ ಬೈಕ್ ಖರೀದಿಸಲು ಬಹುತೇಕ ಜನರು ಬ್ಯಾಂಕ್ ಅಥವಾ ಫೈನಾನ್ಸ್ ಕಂಪನಿಗಳಿಂದ ಸಾಲ ಪಡೆಯುತ್ತಾರೆ. ಈ ಸಂದರ್ಭದಲ್ಲಿ "ಹೈಪೋಥಿಕೇಷನ್" ಎಂಬ ಪದವು ಪ್ರಮುಖವಾಗುತ್ತದೆ.

ಹೈಪೋಥಿಕೇಷನ್ ಎಂದರೆ, ನೀವು ವಾಹನ ಸಾಲ ತೆಗೆದುಕೊಂಡಾಗ ಆ ವಾಹನವನ್ನು ಬ್ಯಾಂಕ್‌ಗೆ ಭದ್ರತೆಯಾಗಿ ಇಡುವುದು. ವಾಹನ ನಿಮ್ಮ ಹೆಸರಿನಲ್ಲೇ ಇರುತ್ತದೆ. ಆದರೆ ಸಾಲ ತೀರಿಸುವವರೆಗೆ ಬ್ಯಾಂಕ್‌ಗೆ ಅದರ ಮೇಲೆ ಕಾನೂನು ಹಕ್ಕು ಇರುತ್ತದೆ

1. ನೀವು ಬ್ಯಾಂಕ್/ಫೈನಾನ್ಸ್ ಕಂಪನಿಯಿಂದ ಸಾಲ ಪಡೆಯುತ್ತೀರಿ

2. ವಾಹನವನ್ನು ನಿಮ್ಮ ಹೆಸರಿನಲ್ಲಿ ನೋಂದಾಯಿಸಲಾಗುತ್ತದೆ.

3. RC (Registration Certificate) : "Hypothecated to [Bank Name]" ಎಂದು ನಮೂದಿರುತ್ತದೆ

4. ನೀವು EMI ಮೂಲಕ ಸಾಲವನ್ನು ತೀರಿಸುತ್ತೀರಿ

5. ಸಾಲ ಪೂರ್ಣಗೊಂಡ ನಂತರ ಹೈಪೋಥಿಕೇಷನ್ ತೆಗೆದುಹಾಕಬೇಕು

ವಾಹನಕ್ಕಾಗಿ ಪಡೆದಿದ್ದ ಸಾಲ




ತೀರಿದಕೂಡಲೇ, ಆರ್‌ಸಿ (ವಾಹನ ನೋಂದಣಿ) ಬುಕ್‌ನಿಂದ ಸಾಲ ನೀಡಿದ ಬ್ಯಾಂಕ್‌ನ ಹೆಸರು ತಂತಾನೆ ರದ್ದಾಗುವ ಹೊಸ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಹೀಗಾಗಿ ಸಾಲ ತೀರಿದ ಬಳಿಕ ಸಾಲ ನೀಡಿದ ಸಂಸ್ಥೆ ಹೆಸರು ತೆಗೆಯಲು ಪದೇ ಪದೇ ಬ್ಯಾಂಕ್ ಮತ್ತು ಆರ್‌ಟಿಒ ಕಚೇರಿಗೆ ತೆರಳಬೇಕಾದ ಪ್ರಮೇಯಕ್ಕೆ ಇದೀಗ ಅಂತ್ಯ ಹಾಡಲಾಗಿದೆ.

ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ಪರಿಚಯಿಸಿರುವ ಈ ಹೊಸ ವ್ಯವಸ್ಥೆ ಮಾ.1 ರಿಂದಲೇ ಅನುಷ್ಠಾನಕ್ಕೆ ಬಂದಿದ್ದು, ಆರಂಭದಲ್ಲಿ ಎಸ್‌ಬಿಐ ಮತ್ತು ಚೋಳಮಂಡಲಂ, ಶ್ರೀರಾಮ್ ಫೈನಾನ್ಸ್, ಸುಂದರಂ ಫೈನಾನ್ಸ್ ಸೇರಿ ಐದು ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಈ ವ್ಯವಸ್ಥೆ ಜಾರಿಗೊಳಿಸಲಿವೆ. ಮುಂದೆ ಇನ್ನಷ್ಟು ಬ್ಯಾಂಕ್ ಸಂಸ್ಥೆಗಳೂ ಹಣಕಾಸು ಅಳವಡಿಸಿಕೊಳ್ಳಲಿವೆ.


ಅಡಮಾನ: ವಾಹನ ಸಾಲ ಪಡೆವಾಗ ಬ್ಯಾಂಕ್‌ಗಳಿಗೆ ಆ ವಾಹನಗಳನ್ನು ಅಡಮಾನ (ಹೈಪೊಥಿಕೇಷನ್) ವಾಡಬೇಕಾಗುತ್ತದೆ. ಇದೊಂದು ಕಾನೂನು ಪ್ರಕ್ರಿಯೆಯಾಗಿದ್ದು, ಈ ವೇಳೆ ವಾಹನದ ಆರ್‌ಸಿಯಲ್ಲಿ ಬ್ಯಾಂಕ್ ಹೆಸರು ಕೂಡ ಸೇರ್ಪಡೆ ಆಗುತ್ತದೆ. ಒಮ್ಮೆ ಸಾಲ ತೀರಿಸಿದ ಬಳಿಕ ಆರ್‌ಸಿಯಿಂದ ಸಾಲದಾತರ ಹೆಸರು ತೆಗೆದು ಹಾಕಬೇಕಾಗುತ್ತದೆ. ಇದಕ್ಕಾಗಿ ಬ್ಯಾಂಕ್‌ನಿಂದ ಎನ್‌ಒಸಿ ಪಡೆದುಕೊಂಡು ಪದೇ ಪದೇ ಆರ್‌ಟಿಒಗೆ ಅಲೆದಾಡಬೇಕಿತ್ತು. ಈ ಅನಗತ್ಯ ಕಿರಿಕಿರಿ ತಪ್ಪಿಸಲು ಕೇಂದ್ರ ಸರ್ಕಾರ ಆನ್‌ಲೈನ್ ಮೂಲಕವೇ ಸ್ವಯಂ ಆಗಿ ಹೈಪೊಥಿಕೇಷನ್ ತೆಗೆದು ಹಾಕುವ ವ್ಯವಸ್ಥೆ ಜಾರಿಗೆ ತಂದಿದೆ.

ಸಾಲ ತೀರಿದ ಕೂಡಲೇ ಆರ್‌ಸಿಯಲ್ಲಿ ಸಾಲ ನೀಡಿದ ಬ್ಯಾಂಕ್ ಹೆಸರು ಸ್ವಯಂಚಾಲಿತವಾಗಿ ರದ್ದು. ಪದೇ ಪದೇ ಬ್ಯಾಂಕ್‌ಗೆ ಮತ್ತು ಆರ್‌ಟಿಒ ಕಚೇರಿಗೆ ತೆರಳಬೇಕಾದ ಕೆಲಸದಿಂದ ವಾಹನ ಮಾಲೀಕರಿಗೆ ಕಡೆಗೂ ಮುಕ್ತಿ ಸಿಕ್ಕಿದಂತಾಯಿತು.

ಯುಎಲ್‌ಐ ಬಳಸಿಕೊಂಡು ಜಾರಿ: ಆರ್‌ಬಿಐನ ಯುನಿಫೈಡ್ ಲೆಂಡಿಂಗ್ ಇಂಟರ್‌ಫೇಸ್ (ಯುಎಲ್‌ಐ) ಬಳಸಿಕೊಂಡು ಈ ವ್ಯವಸ್ಥೆ ಜಾರಿಗೆ ಬರಲಿದ್ದು, ಸಾಲ ತೀರಿದ ಬಳಿಕ ವಾಹನ ಮಾಲೀಕನಿಗೆ ಇ–ವಾಹನ್ ಪೋರ್ಟಲ್ ಮೂಲಕ ಸಾಲದಾತರ ಹೆಸರು ಸ್ವಯಂ ಆಗಿ ತೆಗೆದುಹಾಕಿರುವ ಬಗ್ಗೆ ಎಸ್‌ಎಂಎಸ್ ಕಳುಹಿಸಿ ಕೊಡುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ಸಾರಿಗೆ ಸಚಿವಾಲಯದಿಂದ ಹೊಸ ಯೋಜನೆ ಜಾರಿ ವಾಹನ ಮಾಲೀಕರಿಗೆ ಆಗುತ್ತಿದ್ದ ಕಿರಿಕಿರಿಗೆ ಕಡೆಗೂ ಬ್ರೇಕ್ ನೀಡಿದೆ.


# X - ಟ್ವಿಟರ್‌ಗೆ 20 ವರ್ಷ! ಜಾಕ್ ಡೊರ್ಸಿ ಮೊದಲು ಮಾಡಿದ ಟ್ವೀಟ್ ಏನು ಗೊತ್ತಾ?



**ಸಾ**ಮಾಜಿಕ ಜಾಲತಾಣಗಳಲ್ಲಿ ಬಹಳ ಜನಪ್ರಿಯ ವೇದಿಕೆ ಎಂದರೆ ಅದು ಟ್ವಿಟರ್ (ಇಂದು X ಎಂದು ಕರೆಯಲ್ಪಡುವ). ಟ್ವಿಟರ್ ವೇದಿಕೆ ಅಸ್ತಿತ್ವಕ್ಕೆ ಬಂದು ಹಾಗೂ ಮೊದಲ ಟ್ವೀಟ್ ಪೋಸ್ಟ್ ಆಗಿ ಮಾರ್ಚ್ 22ಕ್ಕೆ 20 ವರ್ಷ ಗತಿಸಿತು! ಹೌದು, ಅಮೆರಿಕದ ಟೆಕಿ ಜಾಕ್ ಡೊರ್ಸಿ ಹಾಗೂ ಅವರ ತಂಡ 2006 ರಲ್ಲಿ ಟ್ವಿಟರ್ ಎಂಬ ಆನ್‌ಲೈನ್ ಮೈಕ್ರೋ ಬ್ಲಾಗಿಂಗ್ ವೇದಿಕೆಯನ್ನು ನಿರ್ಮಾಣ ಮಾಡಿತು.

ಆಗ ಜಾಕ್ ಅವರು ಅಂದುಕೊಂಡತೆ ತಮ್ಮ ವೇದಿಕೆಯನ್ನು ನೆಟ್ಟಿಗರಿಗೆ ಮುಕ್ತಗೊಳಿಸಿ 2006ರ ಮಾರ್ಚ್ 22 ಭಾರತೀಯ ಕಾಲಮಾನ ಬೆಳಿಗ್ಗೆ 2 ಗಂಟೆಗೆ 'just setting up my twttr' ಎಂದು ಟ್ವೀಟ್ ಒಂದನ್ನು ಮಾಡಿದರು.

ಈಗ ಪುನಃ ಆ ಟ್ವೀಟ್ ಅನ್ನು ರಿಶೇರ್ ಮಾಡಿಕೊಂಡಿರುವ ಜಾಕ್, 'five words. 20 years. unfinished' ಎಂದು ಪೋಸ್ಟ್ ಮಾಡಿ ಸ್ಮರಿಸಿಕೊಂಡಿದ್ದಾರೆ.



140 ಅಕ್ಷರಗಳಿಂದ ಜಾಗತಿಕ ಪ್ರಭಾವದವರೆಗೆ 2006ರ ಮಾರ್ಚ್‌ನಲ್ಲಿ Jack Dorsey ಮತ್ತು ಅವರ ಸಹೋದ್ಯೋಗಿಗಳು ಆರಂಭಿಸಿದ ಸರಳ ಆಲೋಚನೆ, ಡಿಜಿಟಲ್ ಯುಗದ ಸಂವಹನವನ್ನು ಸಂಪೂರ್ಣವಾಗಿ ಬದಲಿಸಿದ ವೇದಿಕೆಯಾಗಿತು. 140 ಅಕ್ಷರಗಳ ಮಿತಿಯ ಮೈಕ್ರೋಬ್ಲಾಗಿಂಗ್ ಸೇವೆಯಾಗಿ ಆರಂಭವಾದ ಟ್ವಿಟರ್, ಇಪ್ಪತ್ತು ವರ್ಷಗಳಲ್ಲಿ ಜಾಗತಿಕ ಸಾರ್ವಜನಿಕ ಸಂವಾದವನ್ನು ರೂಪಿಸುವ ಪ್ರಮುಖ ವೇದಿಕೆಯಾಗಿ ಬೆಳೆಯಿತು.

X ಎಂದು ಮರುಬ್ರ್ಯಾಂಡ್ ಆಗಿರುವ ಈ ವೇದಿಕೆ, Elon Musk ಅವರ ಮಾಲೀಕತ್ವದಲ್ಲಿ ಹೊಸ ದಿಕ್ಕಿನತ್ತ ಸಾಗುತ್ತಿದೆ. ಅದರ ಪಯಣವು ಹೊಸ ಆವಿಷ್ಕಾರಗಳು, ವಿವಾದಗಳು ಮತ್ತು ಸಾಂಸ್ಕೃತಿಕ ಬದಲಾವಣೆಗಳಿಂದ ಕೂಡಿದೆ. ಆರಂಭದಲ್ಲಿ ಟ್ವಿಟರ್ ಸಾಮಾನ್ಯ ವ್ಯಕ್ತಿಗಳ ದಿನನಿತ್ಯದ ಚಿಂತನೆಗಳನ್ನು ಹಂಚಿಕೊಳ್ಳುವ ವೇದಿಕೆಯಾಗಿತ್ತು. ಆದರೆ ಬೇಗನೆ ಅದು ತಕ್ಷಣದ ಮಾಹಿತಿ ಹಂಚಿಕೆಯ ಜಾಲತಾಣವಾಗಿ ಪರಿವರ್ತನೆಗೊಂಡಿತು. Arab Spring ಘಟನೆಗಳು, ಜನರನ್ನು ಸಂಘಟಿಸಲು ಮತ್ತು ಅವರ ಧ್ವನಿಯನ್ನು ಜಗತ್ತಿಗೆ ತಲುಪಿಸಲು ಈ ವೇದಿಕೆಯ ಶಕ್ತಿಯನ್ನು ತೋರಿಸಿವೆ.

ಹ್ಯಾಷ್‌ಟ್ಯಾಗ್, ರಿಟ್ವೀಟ್ ಮತ್ತು ಟ್ರೆಂಡಿಂಗ್ ವಿಷಯಗಳು ಟ್ವಿಟ್ಟರ್‌ನ ಗುರುತಾಗಿ ಪರಿಣಮಿಸಿದವು. #MeToo ಸೇರಿದಂತೆ ಹಲವು ಸಾಮಾಜಿಕ ಚಳವಳಿಗಳು ಈ ವೇದಿಕೆಯ ಮೂಲಕ ವಿಶ್ವಮಟ್ಟದಲ್ಲಿ ಪ್ರತಿಧ್ವನಿಸಿವೆ.

ಇಲ್ಲಿ ಸಾಮಾನ್ಯ ನಾಗರಿಕರಿಂದ ಹಿಡಿದು ರಾಜಕೀಯ ನಾಯಕರು, ಸಿನಿತಾರೆಯರು, ಪತ್ರಕರ್ತರು ಎಲ್ಲರೂ ಸಮಾನ ವೇದಿಕೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಸಾಧ್ಯವಾಯಿತು.

ಭಾರತದಲ್ಲಿಯೂ ಟ್ವಿಟರ್ ರಾಜಕೀಯ ಚರ್ಚೆಗಳು, ಸಾರ್ವಜನಿಕ ಅಭಿಪ್ರಾಯ ಮತ್ತು ಜನಸಂಪರ್ಕದಲ್ಲಿ ಪ್ರಮುಖ ಪಾತ್ರವಹಿಸಿದೆ. ಪ್ರಧಾನಮಂತ್ರಿ Narendra Modi ಸೇರಿದಂತೆ ಹಲವು ನಾಯಕರು ಜನರೊಂದಿಗೆ ನೇರವಾಗಿ ಸಂಪರ್ಕ ಸಾಧಿಸಲು ಈ ವೇದಿಕೆಯನ್ನು ಬಳಸಿಕೊಂಡಿದ್ದಾರೆ.

ಆದರೆ ಈ ಪಯಣವು ಸವಾಲುಗಳಿಲ್ಲದದ್ದಲ್ಲ. ತಪ್ಪುಮಾಹಿತಿ (misinformation), ದ್ವೇಷ ಭಾಷಣ (hate speech) ಮತ್ತು ಡೇಟಾ ಗೌಪ್ಯತೆ ಕುರಿತ ಚಿಂತೆಗಳು ಸದಾ ಈ ವೇದಿಕೆಯನ್ನು ಕಾಡುತ್ತಿವೆ. ವಿಷಯ ನಿಯಂತ್ರಣ ಮತ್ತು ನೀತಿಗಳ ಬದಲಾವಣೆಗಳು ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಕಾರಣವಾಗಿವೆ. 2022ರಲ್ಲಿ ಎಲಾನ್ ಮಸ್ಕ್ ಅವರು ಟ್ವಿಟ್ಟರ್ ಅನ್ನು ಸ್ವಾಧೀನಪಡಿಸಿಕೊಂಡದ್ದು ಪ್ರಮುಖ ತಿರುವು. ಅದನ್ನು ಫಿ ಎಂದು ಮರುಬ್ರ್ಯಾಂಡ್ ಮಾಡುವ ಮೂಲಕ "ಎವ್ರಿಥಿಂಗ್ ಆಪ್" ಆಗಿ ರೂಪಿಸುವ ಕನಸು ಹೊಂದಿದ್ದಾರೆ. ಪಾವತಿ ವ್ಯವಸ್ಥೆ, ಮೀಡಿಯಾ ಮತ್ತು ಸಂವಹನವನ್ನು ಒಟ್ಟುಗೂಡಿಸುವ ಈ ಪ್ರಯತ್ನ, ವೇದಿಕೆಯ ಭವಿಷ್ಯದ ಬಗ್ಗೆ ಹೊಸ ಪ್ರಶ್ನೆಗಳನ್ನು ಎಬ್ಬಿಸಿದೆ.

ಇಪ್ಪತ್ತು ವರ್ಷಗಳ ಈ ಪಯಣದ ನಂತರ, ಟ್ವಿಟ್ಟರ್ (ಈಗ X) ಕೇವಲ ಸಾಮಾಜಿಕ ಜಾಲತಾಣವಲ್ಲ; ಅದು ಜಗತ್ತಿನ ಸಂಭಾಷಣೆಗಳ ಪ್ರತಿಬಿಂಬವಾಗಿದೆ. ತಕ್ಷಣದ, ಅನ್‌ಫಿಲ್ಟರ್ಡ್ ಮತ್ತು ಪ್ರಭಾವಶಾಲಿ.

ಮುಂದಿನ ದಿನಗಳಲ್ಲಿ, ಅಭಿವ್ಯಕ್ತಿಯ ಸ್ವಾತಂತ್ರ್ಯ ಮತ್ತು ಜವಾಬ್ದಾರಿತ್ವ, ಆವಿಷ್ಕಾರ ಮತ್ತು ಸ್ಥಿರತೆ ನಡುವಿನ ಸಮತೋಲನವನ್ನು ಸಾಧಿಸುವುದೇ ಫಿನ ಭವಿಷ್ಯವನ್ನು ನಿರ್ಧರಿಸಲಿದೆ. ಒಂದು ಟ್ವೀಟ್‌ನಿಂದ ಆರಂಭವಾದ ಈ ಕಥೆ ಇನ್ನೂ ಮುಗಿದಿಲ್ಲ.

# ಭಾರತದ ಜಿಪಿಎಸ್ 'ನಾವಿಕ್'?




**ನಾ**ವಿಕ್‌ನ (NawIC) ವಿಸ್ತೃತರೂಪ ನ್ಯಾವಿಗೇಷನ್ ವಿತ್ ಇಂಡಿಯನ್ ಕಾನ್‌ಸ್ಟಲೇಷನ್. ಕನ್ನಡದಲ್ಲಿ ಹೇಳುವುದಾದರೆ, ಉಪಗ್ರಹಗಳ ಗುಚ್ಛದ ಮೂಲಕ ಪಥದರ್ಶನ. ಇದರ ಮೂಲ ಹೆಸರು ಭಾರತೀಯ ಪ್ರಾದೇಶಿಕ ಪಥದರ್ಶಕ ಉಪಗ್ರಹ ವ್ಯವಸ್ಥೆ (ಐಆರ್‌ಎನ್‌ಎಸ್‌ಎಸ್–ಇಂಡಿಯನ್ ರೀಜನಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್), ಇದು, ಅಮೆರಿಕದ ಜಿಪಿಎಸ್ (ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್) ಮಾದರಿಯಲ್ಲೇ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ), ಸ್ವತಂತ್ರವಾಗಿ ಮತ್ತು ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಪಥದರ್ಶಕ ವ್ಯವಸ್ಥೆ 2016 ರಲ್ಲಿ ಇದಕ್ಕೆ 'ನಾವಿಕ್' ಎಂದು ಮರುನಾಮಕರಣ ಮಾಡಲಾಯಿತು. ಭೂಸ್ಥಿರ ಮತ್ತು ಭೂಸಮನ್ವಯ ಕಕ್ಷೆಗಳಲ್ಲಿ ಸುತ್ತುತ್ತಿರುವ ಏಳು ಉಪಗ್ರಹಗಳ ಗುಚ್ಛವು ಜಿಪಿಎಸ್ ಮಾದರಿಯಲ್ಲಿ ಪಥದರ್ಶನ (ದಿಕ್ಕು), ನಿಖರ ಸ್ಥಳದ ಮಾಹಿತಿ (ಪೊಸಿಷನಿಂಗ್) ಮತ್ತು ಸಮಯದ (ಟೈಮಿಂಗ್) ಮಾಹಿತಿ ನೀಡುತ್ತದೆ. ಭಾರತದ ಸಂಪೂರ್ಣ ಭೂಭಾಗ ಮತ್ತು ಸುತ್ತಲಿನ 1,500 ಕಿ.ಮೀ ವ್ಯಾಪ್ತಿಯಲ್ಲಿ ನಿಖರ ಪಥದರ್ಶನ, ಸ್ಥಳದ ಮಾಹಿತಿ ನೀಡುವ ಸಾಮರ್ಥ್ಯ ಇದು ಹೊಂದಿದೆ (ಅಮೆರಿಕ, ರಷ್ಯಾ, ಚೀನಾ, ಯುರೋಪಿನ ಪಥದರ್ಶಕ ವ್ಯವಸ್ಥೆಯು ಇಡೀ ಜಗತ್ತನ್ನೇ ವ್ಯಾಪಿಸಿವೆ). ಪ್ರಮುಖವಾಗಿ ಎರಡು ಸೇವೆಗಳನ್ನು ಇದು ನೀಡುತ್ತದೆ. ಒಂದು ನಿಗದಿತ ಸ್ಥಳದ ಮಾಹಿತಿ ಸೇವೆ (ಸ್ಟಾಂಡರ್ಡ್ ಪೊಸಿಷನಿಂಗ್ ಸರ್ವಿಸ್–ಎಸ್‌ಪಿಎಸ್). ಎಲ್ಲ ಬಳಕೆದಾರರಿಗೆ ಅಂದರೆ, ಸಾರ್ವಜನಿಕರಿಗೆ ಈ ಸೇವೆ ಲಭ್ಯ. ಇನ್ನೊಂದು ನಿರ್ಬಂಧಿತ ಸೇವೆ (ರಿಸ್ಟ್ರಿಕ್ಟೆಡ್ ಸರ್ವಿಸ್–ಆರ್‌ಎಸ್). ಸೇನೆ ಮುಂತಾದ ಅಧಿಕೃತ ಬಳಕೆದಾರರಿಗೆ ಮಾತ್ರ ಈ ಸೇವೆಯನ್ನು ಇಸ್ರೊ ನೀಡುತ್ತದೆ. ಇಸ್ರೊ ಪ್ರಕಾರ, ಈ ವ್ಯವಸ್ಥೆಯು ಬಳಕೆದಾರ ಇರುವ ಸ್ಥಳದ ಮಾಹಿತಿಯನ್ನು ನಿಖರವಾಗಿ ಹೇಳುವ (ಗುರುತಿಸಿದ ಸ್ಥಳದ 20 ಮೀಟರ್ ವ್ಯಾಪ್ತಿಯ ಒಳಗೆ) ಸಾಮರ್ಥ್ಯವನ್ನು ಹೊಂದಿದೆ. ಪಥದರ್ಶಕ ವ್ಯವಸ್ಥೆಯನ್ನು ಬಲಪಡಿಸುವ ಇರಾದ ಇಸ್ರೋಗೆ ಇದ್ದರೂ, ಹಳೆಯ ಉಪಗ್ರಹಗಳಿಗೆ ಬದಲಿ ಹೊಸ ಉಪಗ್ರಹಗಳನ್ನು ಕಳುಹಿಸುವ ಪ್ರಕ್ರಿಯೆ ನಿಧಾನವಾಗಿರುವುದು, 2025ರಲ್ಲಿ ಎನ್‌ವಿಎಸ್–02 ಉಪಗ್ರಹ ಉಡಾವಣಾ ವೈಫಲ್ಯ ಈ ಮಹತ್ವಾಕಾಂಕ್ಷಿ ಯೋಜನೆಗೆ ತೀವ್ರ ಹಿನ್ನಡೆ ಉಂಟುಮಾಡಿದೆ. ಕಾರ್ಯಾಚರಣೆ ಸ್ಥಗಿತಗೊಳಿಸಿರುವ ಮತ್ತು ಹಳೆಯ ಉಪಗ್ರಹಗಳ ಬದಲಿಗೆ 2026ರ ವರ್ಷಾಂತ್ಯದ ವೇಳೆಗೆ ಮೂರು ಉಪಗ್ರಹಗಳನ್ನು ಉಡಾವಣೆ ಮಾಡುವುದಾಗಿ ಇಸ್ರೋ ಈ ಹಿಂದೆ ಹೇಳಿತ್ತು. ಆದರೆ, ಈ ಬಗ್ಗೆ ಅಧಿಕೃತ ಮಾಹಿತಿ ಇನ್ನಷ್ಟೇ ಹೊರಬೀಳಬೇಕಿದೆ. ದೇಶದಲ್ಲಿ ವಿಮಾನಯಾನ ಸೌಕಾಯಾನ, ರೈಲ್ವೆ, ಸೇನೆ ಉದ್ದೇಶಗಳು, ಪ್ರವಾಹ, ಭೂಕುಸಿತ, "ನಾವಿಕ್ ಅನ್ನು ಬಳಸಲಾಗುತ್ತಿದೆ. ಜನಸಮಾನ್ಯರಿಗೆ ಇದುಲಭ್ಯವಿದ್ದರೂ, ಇದನ್ನು ಬಳಸುವವರ ಸಂಖ್ಯೆ ಕಡಿಮೆ. ಜಿಪಿಎಸ್‌ನಷ್ಟು ಜನಪ್ರಿಯತೆ ಪಡೆದಿಲ್ಲ.

ಜಗತ್ತಿನಲ್ಲಿ ನಾಲ್ಕು ಜಾಗತಿಕ ಪಥದರ್ಶಕ ಉಪಗ್ರಹ ವ್ಯವಸ್ಥೆಗಳಿವೆ. ಅವುಗಳೆಂದರೆ, ಅಮೆರಿಕದ 'ಜಿಪಿಎಸ್' (31 ಉಪಗ್ರಹಗಳು), ರಷ್ಯಾದ 'ಜಿಎಲ್‌ಓಎನ್‌ಎಎಸ್‌ಎಸ್' (24 ಉಪಗ್ರಹಗಳು), ಚೀನಾದ 'ಬೈದೊ' (40ಕ್ಕೂ ಹೆಚ್ಚು ಉಪಗ್ರಹಗಳು) ಮತ್ತು ಐರೋಪ್ಯ ಒಕ್ಕೂಟದ ಗೆಲಿಲಿಯೊ (30 ಉಪಗ್ರಹಗಳು), ಜಪಾನ್ ನಾಲ್ಕು ಉಪಗ್ರಹಗಳನ್ನು ಒಳಗೊಂಡ ಕ್ಯುಬಡ್‌ಎಎಸ್ ಪ್ರಾದೇಶಿಕ ಪಥದರ್ಶಕ ಉಪಗ್ರಹ ವ್ಯವಸ್ಥೆಯನ್ನು ಒಳಗೊಂಡಿದೆ. ಪ್ರಾದೇಶಿಕ ಪಥದರ್ಶಕ ವ್ಯವಸ್ಥೆ ವ್ಯವಸ್ಥಿತವಾಗಿ ಕಾರ್ಯಾಚರಿಸಲು ಕನಿಷ್ಠ ಮೂರರಿಂದ ನಾಲ್ಕು ಉಪಗ್ರಹಗಳು ಅಗತ್ಯ. ಭಾರತವು ಮೊದಲು ಪ್ರಾದೇಶಿಕ ಪಥದರ್ಶಕ ಉಪಗ್ರಹ ವ್ಯವಸ್ಥೆ ರೂಪಿಸಿ, ನಂತರ ಅದನ್ನು ಜಾಗತಿಕ ಪಥದರ್ಶಕ ಉಪಗ್ರಹ ವ್ಯವಸ್ಥೆಯಾಗಿ ಪರಿವರ್ತಿಸುವ ಯೋಜನೆ ಹೊಂದಿತ್ತು. ಆದರೆ, ಈಗ ಪ್ರಾದೇಶಿಕ ವ್ಯವಸ್ಥೆಯೇ ಸ್ಥಗಿತಗೊಳ್ಳುವ ಆತಂಕ ಎದುರಾಗಿದೆ.

# ನಬಾಟಿಯನ್ನರ ನಾಡಿನಲ್ಲಿ (ಮಧ್ಯಪ್ರಾಚ್ಯದ ರಹಸ್ಯಗಳು)

## ಸಾಹಸಿ ಕನ್ನಡಿಗನೊಬ್ಬನ ಪ್ರವಾಸಿ ಕಥನ




**ಅ**ಸಲಿಗೆ ಜೋರ್ಡಾನಿಗೆ ಹೋಗುವ ಯಾವ ಪ್ಲಾನೂ ನನಗೆ ಇರಲಿಲ್ಲ. ಇರಾದೆ ಇದ್ದದ್ದು ಇಸ್ರೇಲಿಗೆ ಹೋಗೋಕೆ. ಪುಟ್ಟ ರಾಷ್ಟ್ರವೊಂದು ತನ್ನ ಅಸ್ಥಿತ್ವಕ್ಕಾಗಿ, ಸುತ್ತಲೂ ರಣಹದ್ದುವಿನಂತೆ ಕುಕ್ಕಿತಿನ್ನಲು ಕಾದುಕುಳಿತಿರುವ ಆರೇಳು ರಾಷ್ಟ್ರಗಳನ್ನು ಅವು ಕೆಣಕಿದಾಗಲೆಲ್ಲ ಹೇಗೆ ಬಡಿದು ಬಿಸಾಕುತ್ತದೆಂಬ ವಾಸ್ತವತೆಯನ್ನು ಕೇಳುವುದೇ ರಣರೋಚಕ. ಬರೀ ಇಸ್ರೇಲು ಏನು ನೋಡುವುದು ಜೊತೆಯಲ್ಲಿ ಇನ್ನೊಂದು ದೇಶವನ್ನೂ ನೋಡೇ ಬಿಡೋಣವೆಂದು ಅಂದುಕೊಂಡಾಗ ಆಯ್ಕೆ ಮಾಡಿಕೊಂಡದ್ದು ಇಸ್ರೇಲಿನೊಂದಿಗೆ ಸುಮಾರು 480 ಕಿಲೋಮೀಟರಿನಷ್ಟು ಸರಹದ್ದು ಹೊಂದಿರುವ ಜೋರ್ಡಾನನ್ನು. ನಾನು ನನ್ನ ಟ್ರಾವೆಲ್ ಪಾರ್ಟ್ನರ್ ಸಂಕೇತ್ ಇಸ್ರೇಲ್ ಜೋರ್ಡಾನು ಜಂಟಿ ಟೂರು ಪ್ಲಾನು ಮಾಡಿ ಮೊದಲು ನೋಡಬೇಕಾಗಿದ್ದ ಜೋರ್ಡಾನಿನ ರಾಜಧಾನಿ ಅಮ್ಮಾನ್‌ಗೆ ಬೆಂಗಳೂರಿನಿಂದ ನಾನ್ ರೀಫಂಡಬಲ್ ಟಿಕೇಟು ಕೂಡ ಬುಕ್ ಮಾಡಾಗಿತ್ತು. ಟಿಕೆಟ್ ಬುಕ್ ಮಾಡಿದ ಮರುದಿನವೇ (ಅಕ್ಟೋಬರ್ 7) ಹಮಾಸ್ ಗಾಜಾ ಪಟ್ಟಿಯಿಂದ ಐದು ಸಾವಿರ ರಾಕೆಟ್ಟುಗಳನ್ನು ಇಸ್ರೇಲಿನ ಮೇಲೆ ಬಿಸಾಕಿ ಅಘೋಷಿತ ಯುದ್ಧ ಸಾರಿತ್ತು. ಇನ್ನು ಅರಬ್–ಇಸ್ರೇಲ್ ಯುದ್ಧ ಫಿಕ್ಸ ಅಂದುಕೊಂಡರೂ, ಜೋರ್ಡಾನು ಒಂದಾದರೂ ನೋಡೇಬಿಡೋಣ ಅನ್ನೋ ಹುಂಬತನಕ್ಕೆ ಫಿಕ್ಸಾಗಿ ಹೋಗಿದ್ದೆವು. ಇಸ್ರೇಲು ಹೋಗ್ತಾ ಇಲ್ಲ, ಜೋರ್ಡಾನು ಮಾತ್ರ ಹೋಗ್ತಾ ಇದೀವಿ ಅಂದಾಗೆಲ್ಲ ಬಹುತೇಕರು ಮೋಸ್ಟ್ಲಿ ಇದು ಹುಚ್ಚುತನದ ಪರಮಾವಧಿ ಅಂತಲೇ ಬೈದು ಬುದ್ದಿ ಹೇಳಿದರು. ಕೇಳಿದವರಿಗೆ ಜೋರ್ಡಾನು ಹೋಗುತ್ತೀವಿ ಅಂತ ಏನೇ ಅಂದರೂ ಪಕ್ಕದ ಬೆಂಜಮಿನ್ ಅಂಕಲ್ ಬಗ್ಗೆ ಒಂದು ಭಯ ಇದ್ದೇ ಇತ್ತು.ಅದು ನಮ್ಮ ಟೂರಿನ ಕೊನೆಯವರೆಗೂ ಇತ್ತು.

ಆದರೆ ಅದಕ್ಕಿಂತ ದೊಡ್ಡ ಭಯ ಆಗಿದ್ದು ಜೋರ್ಡಾನಿನಲ್ಲಿ ಇರೋದು ಶೇ.25%ರಷ್ಟು ಪ್ಯಾಲೀಸ್ತಿನಿಯರು ಹಾಗೂ ಅಮ್ಮಾನ್ ನಗರವೊಂದರಲ್ಲೇ ಶೇಕಡಾ ಅರವತ್ತರಷ್ಟು ಪ್ಯಾಲಿಸ್ತೀನಿಯರು ಇದ್ದಾರೆ ಎಂದು ತಿಳಿದ ಮೇಲೆ. ಅದೊಂತರ ಬೆಂಕಿ ಬಾಣಲೆ ಕಥೆ. ಹೀಗೆ ಶುರುವಾಯ್ತು ನಮ್ಮ ಜೋರ್ಡಾನ್ ಪಯಣ. ಮುಂಜಾನೆ ನಾಲ್ಕಕ್ಕೆ ಬೆಂಗಳೂರಿನಿಂದ ನಮ್ಮನ್ನೊತ್ತ ಏರ್ ಅರೇಬಿಯಾ ಶಾರ್ಜಾದಲ್ಲೊಂದು ಸ್ಟಾಪು ಕೊಟ್ಟು ಮತ್ತೆ ಪರ್ಷಿಯನ್ ಗಲ್ಫ್‌ನ ಮೇಲಿಂದ ಕತಾರ್, ಬಹ್ರೇನ್, ಇರಾಕು ದಾಟಿ ಒಟ್ಟಾರೆ ಏಳು ಗಂಟೆಗಳ, 4700 ಕಿ.ಮೀ ಜರ್ನಿಯ ನಂತರ ಅಮ್ಮಾನಿಗೆ ಇಳಿಸಿದಾಗ ಸಮಯ ಬೆಳಗ್ಗೆ ಹತ್ತಾಗಿತ್ತು. ಭಾರತದಲ್ಲಾಗ ಮಧ್ಯಾಹ್ನ 12:30. ಎರಡುವರೆ ಗಂಟೆಗಳ ಟೈಮ್ ಡಿಫರೆನ್ಸು. Queen Alia Airport ನಲ್ಲಿ ಒಂದಷ್ಟು ಅಮೇರಿಕನ್ ಡಾಲರುಗಳನ್ನು ಜೋರ್ಡಾನಿಯನ್ ದಿನಾರ್‌ಗೆ ಎಕ್ಸ್ಚೇಂಜು ಮಾಡಿಕೊಂಡ ನಂತರ, ತೆರಿಗೆ ಸೇರಿ ಹೆಚ್ಚು ಕಮ್ಮಿ ಒಂದು Jordanian Dinar (JD)ಗೆ 123 ರೂಪಾಯಿಗಳನ್ನು ತೆರಬೇಕಾಗಿತ್ತು. ಅಮೇರಿಕನ್ ಡಾಲರ್ ಇದರ ಮುಂದೆ ತಲೆಬಾಗಿ ನಿಂತು ಬಿಡುತ್ತೆ. So Against ಇಂಡಿಯನ್ ರೂಪಾಯಿ ಕಾಸ್ಟ್ ಆಫ್ ಲಿವಿಂಗ್ ತೊಂಬತ್ತೊಂದು ಪರ್ಸೆಂಟ್ ಹೆಚ್ಚು. ಉದಾಹರಣೆಗೆ ಒಂದು ಲೀಟರ್ ನೀರಿಗೆ ಒಂದು ದಿನಾರ್ ಅಂದರೆ ಸುಮಾರು 120 ರೂಪಾಯಿ. ಒಂದು ಮಿಡಲ್ ರೇಂಜಿನ ನಾನ್ ವೆಜ್ ಊಟಕ್ಕೆ ಹತ್ತು ದಿನಾರ್ ಅಂದರೆ 1200 ರೂಪಾಯಿ ಕಾಫಿಯೊಂದಕ್ಕೆ ಅರ್ಧದಿಂದ ಒಂದು ದಿನಾರು. ಪಿಂಟ್ ಬಿಯರ್ (Amstel) ಒಂದಕ್ಕೆ 4 ರಿಂದ 5 ದಿನಾರ್. ಪೆಟ್ರೋಲ್ ಮಾತ್ರ ಅಗ್ಗ ಅನಿಸುತ್ತೆ. ಒಂದು ಲೀಟರಿಗೆ ಒಂದು ದಿನಾರ್.

ಜೋರ್ಡಾನು ವಿಸ್ತೀರ್ಣದಲ್ಲಿ ಸುಮಾರು ನಮ್ಮ ಕರ್ನಾಟಕದ ಅರ್ಧದಷ್ಟಿರುವ, ಕೇವಲ ಒಂದು ಕಾಲು ಕೋಟಿಯಷ್ಟು ಜನಸಂಖ್ಯೆಯಿರುವ ಶೇಕಡಾ 95ರಷ್ಟು ಸುನ್ನಿ ಮುಸ್ಲಿಂ, ಶೇ.3%ರಷ್ಟು ಕ್ರಿಶ್ಚಿಯನ್ನರನ್ನು ಹೊಂದಿರುವ ಮರುಭೂಮಿಯನ್ನೇ ಹಾಸಿ ಹೊದ್ದಿರುವ, ಅರೇಬಿಕ್ ಮಾತನಾಡುವ, ರಾಜ ಮನೆತನದ ಆಳ್ವಿಕೆ ಹೊಂದಿರುವ ಮಧ್ಯಪ್ರಾಚ್ಯದ ರಾಷ್ಟ್ರ, ಉತ್ತರಕ್ಕೆ ಸಿರಿಯಾ, ಈಶಾನ್ಯಕ್ಕೆ ಇರಾಕ್ ದಕ್ಷಿಣ ಮತ್ತು ಆಗ್ನೇಯಕ್ಕೆ ಸೌದಿ ಅರೇಬಿಯ ಪಶ್ಚಿಮಕ್ಕೆ ಪ್ಯಾಲೆಸ್ತೀನಿನ ವೆಸ್ಟಬ್ಯಾಂಕ್ ಮತ್ತು ಇಸ್ರೇಲು. ಸುಮಾರು ಮೂವತ್ತು ಲಕ್ಷದಷ್ಟು ಪ್ಯಾಲೆಸ್ಟೈನಿಯರು, ಹದಿನೈದು ಲಕ್ಷದಷ್ಟು ಸಿರಿಯನ್ ನಿರಾಶ್ರಿತರು ಜೋರ್ಡಾನಿನಲ್ಲಿದ್ದಾರೆ. ಜೋರ್ಡಾನಿನ ಅತೀ ಮುಖ್ಯ ಪ್ರವಾಸೀ ತಾಣಗಳೆಂದರೆ ಆಧುನಿಕ ಜಗತ್ತಿನ ಏಳು ಅದ್ಭುತಗಳಲ್ಲೊಂದಾದ ಪೆಟ್ರಾ, ಮೃತ ಸಮುದ್ರ (Dead Sea) ಮತ್ತು ವಾಡಿರಮ್ ಡೆಸರ್ಟ್. ಆರೇ ದಿನಗಳ ಟೂರಾಗಿದ್ದರಿಂದ ರೆಸ್ಟು ಕೊಡುವ ಯಾವುದೇ ಪ್ಲಾನಿಲ್ಲದೆ ಏರ್ಪೋರ್ಟಿಂದ ಸೀದ ನಮಗಾಗಿ ಕಾಯುತಿದ್ದ ಕಾರಿನಲ್ಲಿ ಜೋರ್ಡಾನಿನ ಉತ್ತರ ಭಾಗದಲ್ಲಿರುವ ಜೆರಾಷ್ (Jerash) ನಗರಕ್ಕೆ ಸಾಗಿದೆವು. ಅಲ್ಲಿಂದ ಐಸಿಸ್‌ನ ತವರು ಸಿರಿಯಾಕ್ಕೆ ಕೇವಲ ಐವತ್ತು ಕಿ.ಮೀ. ಇಟಲಿಯನ್ನು ಹೊರತುಪಡಿಸಿದರೆ ರೋಮನ್ನರ ವಾಸ್ತುಶಿಲ್ಪದ ದೊಡ್ಡ ಸಂಗ್ರಹಗಳು ಇರುವ ಸ್ಥಳಗಳಲ್ಲಿ ಜೆರಾಷ್ ಕೂಡ ಒಂದು. ಮರುಭೂಮಿಯಲ್ಲೊಂದು ಗತಿಸಿಹೋದ ರೋಮನ್ ಸಾಮ್ರಾಜ್ಯದ ಸೊಬಗನ್ನು ಜೆರಾಷ್ ನೆನಪಿಸುತ್ತೆ. ಹಲವಾರು Roman Coloumnಗಳು, ಗ್ಲಾಡಿಯೇಟರುಗಳನ್ನು ನೆನಪಿಸುವ Coliseumಗಳು, Amphitheatreಗಳು, ಸುಂದರ Oval Forum/Plazza, Zeus ಟೆಂಪಲ್ ಹೀಗೆ ಹತ್ತು ಹಲವು ಸುಂದರ ಕೆತ್ತನೆ/ರಚನೆಗಳು ಜೆರಾಷಿನಲ್ಲಿ ಕಾಣಸಿಗುತ್ತೆ. ಆದರೆ ಸರಿಯಾದ ನಿರ್ವಹಣೆಗಳಿಲ್ಲದೆ ಕಲಾಕೃತಿಗಳು ಸೊರಗಿವೆ. ಅವುಗಳಲ್ಲೆಷ್ಟು ಕಳುವಾಗುತ್ತಿವೆಯೋ ಗೊತ್ತಿಲ್ಲ. ಇದು ಮೊದಲ ಪ್ರಾರಂಭ ದಿನದ ಅರ್ಧ ಪ್ರಯಾಸದ ಪ್ರವಾಸಿ ಟಿಪ್ಪಣಿ.

**ಲೇಖಕರು: ದಿವಿನ್ ಮಗ್ಗಲಮಕ್ಕಿ, ಚಿಕ್ಕಮಗಳೂರು**





**ಯಾರೇ ನೀನು ಚೆಲುವೆ?....**

# ಟ್ವೆಂಟಿ–ಟ್ವೆಂಟಿ ವಿಶ್ವಕಪ್ ಭಾರತ ಚಾಂಪಿಯನ್



**ಅ**ಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮಾರ್ಚ್ 8 ರಂದು ನಡೆದ ಟ್ವೆಂಟಿ–ಟ್ವೆಂಟಿ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಸೂರ್ಯಕುಮಾರ್ ಯಾದವ್ ನೇತೃತ್ವದ ತಂಡವು ನ್ಯೂಜಿಲೆಂಡ್ ತಂಡವನ್ನು ಸೋಲಿಸಿ ದಾಖಲೆ ನಿರ್ಮಿಸಿದೆ. ಮಿಜೆಲ್ ಸ್ಯಾಂಟ್ನರ್ ನೇತೃತ್ವದ ನ್ಯೂಜಿಲೆಂಡ್ ತಂಡವನ್ನು 96 ರನ್‌ಗಳ ಭರ್ಜರಿ ಅಂತರದಿಂದ ಮಣಿಸಿದ ಭಾರತ ಸತತ ಎರಡನೇ ಬಾರಿ ಟಿ20 ವಿಶ್ವಕಪ್ ಪ್ರಶಸ್ತಿಯನ್ನು ಉಳಿಸಿಕೊಂಡಿದೆ.

ಈ ಗೆಲುವಿನೊಂದಿಗೆ ಭಾರತವು ತವರಿನಲ್ಲಿ ಟಿ20 ವಿಶ್ವಕಪ್ ಗೆದ್ದ ಮೊದಲ ದೇಶವಾಗಿರುತ್ತದೆ. 2024ರ ಆವೃತ್ತಿಯನ್ನು ಭದ್ರಪಡಿಸಿಕೊಂಡ ನಂತರ ಬ್ಯಾಕ್ ಟು ಬ್ಯಾಕ್ ಗೆದ್ದ ಮೊದಲು ತಂಡ ಮತ್ತು ಮೂರು ಬಾರಿ (2007, 2024, 2026) ಪ್ರಶಸ್ತಿ ಗೆದ್ದ ಮೊದಲ ತಂಡವಾಗಿದೆ. ಈ ಬಗ್ಗೆ ಟ್ವೀಟ್ ಮಾಡಿರುವ ಸೂರ್ಯಕುಮಾರ್ ಯಾದವ್, ಟಿ20 ವಿಶ್ವಕಪ್ ಗೆಲುವು ಒಂದು ಶತಕೋಟಿಗೂ ಹೆಚ್ಚು ಭಾರತೀಯರ ಕನಸು ನನಸಾಗಿದೆ ಎಂದು ಬಣ್ಣಿಸಿದ್ದಾರೆ. ಭಾರತವನ್ನು ಮುನ್ನಡೆಸುವ ಮತ್ತು ಪ್ರತಿನಿಧಿಸುವ ಬಗ್ಗೆ ಅವರು ಹೆಮ್ಮೆ ವ್ಯಕ್ತಪಡಿಸಿದರು. ಮತ್ತು ಅವರನ್ನು ಬೆಂಬಲಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸಿದ್ದಾರೆ. ನಾವು ಕೇವಲ ಒಂದು ತಂಡವಲ್ಲ. ಒಂದು ಕುಟುಂಬ, ಕೇವಲ ಟ್ರೋಫಿ ಅಲ್ಲ. ನಮ್ಮದು ಒಂದು ಶತಕೋಟಿ ಜನರ ಕನಸು.

ನ್ಯೂಜಿಲೆಂಡ್ 19ನೇ ಓವರ್‌ನಲ್ಲಿ ತನ್ನ ಕೊನೆಯ ವಿಕಟ್ ಅನ್ನು ಕಳೆದುಕೊಳ್ಳುತ್ತಿದಂತೆಯೇ ಭಾರತ 96 ರನ್ ಗಳಿಂದ ಗೆದ್ದು ವಿಜಯೋತ್ಸವ ಆಚರಿಸಿತು.

ಈ ಹುಮ್ಮಸ್ಸಿನ ಯುವ ತಂಡವನ್ನು ಮುನ್ನಡೆಸಲು ತಮಗೆ ಹೆಮ್ಮೆ ಇದೆ. ಮತ್ತು ನಾನು ಭಾರತವನ್ನು ಪ್ರತಿನಿಧಿಸಲು ಹೆಮ್ಮೆಪಡುತ್ತೇನೆ. ನನ್ನ ತಂಡದಲ್ಲಿ ವಿಜಯದ ಎಲ್ಲಾ ರುವಾರಿಗಳಾಗಿ ನಿಂತಿರುವ ಎಲ್ಲರಿಗೂ ನನ್ನ ಧನ್ಯವಾದಗಳು

ಫೈನಲ್ ಆರಂಭದ ಮೊದಲು ಗಾಯಕ ರಿಕಿ ಮಾರ್ಟಿನ್ ಆಕರ್ಷಕ ಪ್ರದರ್ಶನ ನೀಡಿದರು. ಟಾಸ್ ಸಮಯದಲ್ಲಿ 2.1 ಕೋಟಿ ಮತ್ತು 4.2 ಕೋಟಿ ವೀಕ್ಷಕರು ನೇರ ಪ್ರಸಾರ ವೀಕ್ಷಿಸಿದರೆ, ಭಾರತ ಬ್ಯಾಟಿಂಗ್ ಪ್ರಾರಂಭಿಸಿದಾಗ ವೀಕ್ಷಕರ ಸಂಖ್ಯೆ 6.5 ಕೋಟಿ ತಲುಪಿತು. ಪಂದ್ಯದಲ್ಲಿ ಭಾರತ ಅದ್ಭುತ ಪ್ರದರ್ಶನ ನೀಡುತ್ತಿದ್ದಂತೆ ವೀಕ್ಷಕರ ಸಂಖ್ಯೆ ಹೆಚ್ಚುತ್ತಲೇ ಇತ್ತು. ನ್ಯೂಜಿಲೆಂಡ್ ತಂಡವನ್ನು ಬೆನ್ನಟ್ಟುವ ಮೊದಲು ಭಾರತ 255 ರನ್‌ಗಳ ಬೃಹತ್ ಗುರಿಯನ್ನು ನೀಡಿತು. ಈ ವೇಳೆ ವೀಕ್ಷಕರ ಸಂಖ್ಯೆ 49.9 ಕೋಟಿಯಾಗಿತ್ತು. ಮೊದಲ ಓವರ್ ಅಂತ್ಯದ ವೇಳೆಗೆ ಅದು 50.3 ಕೋಟಿಗೆ ಏರಿತು. ಭಾರತದ ಬ್ಯಾಟಿಂಗ್ ಅಂತ್ಯದಲ್ಲಿ 43.9 ಕೋಟಿ ಇದ್ದ ವೀಕ್ಷಕರ ಸಂಖ್ಯೆ ಇನ್ನಿಂಗ್ಸ್ ವಿರಾಮದ ಸಮಯದಲ್ಲಿ 44.3 ಕೋಟಿಗೆ ಏರಿತು. ಜಿಯೋ ಹಾಟ್ ಸ್ಟಾರ್ ನಲ್ಲಿ 74.5 ಕೋಟಿ ಏಕಕಾಲಿಕ ವೀಕ್ಷಕರನ್ನು ಪಡೆದಿದೆ. ನಂತರ ಪಂದ್ಯದ ಪಶಸ್ತಿ ವಿತರಣೆಯ ಸಮಯದಲ್ಲಿ ವೀಕ್ಷಣೆಯ ಸಂಖ್ಯೆ 82.1 ಕೋಟಿ ರೂ. ತಲುಪಿದೆ. ನ್ಯೂಜಿಲೆಂಡ್ ತಂಡದ ಬ್ಯಾಂಟಿಂಗ್ ಆಡುವ ಮುನ್ನ ಭಾರತ 255 ರನ್‌ಗಳ ಬೃಹತ್ ಗುರಿಯನ್ನು ನೀಡಿತು. ಈ ವೇಳೆ ವೀಕ್ಷಕರ ಸಂಖ್ಯೆ 49.9 ಕೋಟಿಯಾಗಿತ್ತು. ಮೊದಲ ಓವರ್ ಅಂತ್ಯದ ವೇಳೆಗೆ ಅದು 50.3 ಕೋಟಿಗೆ ಏರಿತ್ತು.

ಐಸಿಸಿ ಟಿ20 ವಿಶ್ವಕಪ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಭಾರತ ಸಾಧಿಸಿದ ಈ ವಿಜಯದ ಸಂಭ್ರಮಾಚರಣೆಗೆ ಭಾನುವಾರದ ರಾತ್ರಿ ಬೆಳಕಿನ ಪಟಾಕಿ ಸಿಡಿತದ ಮೂಲಕ ನಾಂದಿ ಹಾಡಿದೆ. ಈ ಅದ್ಭುತ ಗೆಲುವು ದೇಶಾದ್ಯಂತ ಸಂಭ್ರಮಾಚರಣೆಯು ಮುಗಿಲು ಮುಟ್ಟಿತು. ಈ ವಿಶ್ವಕಪ್ ಗೆಲುವಿನ ನಂತರ, ದೇಶಾದ್ಯಂತ ಕ್ರಿಕೆಟ್ ಅಭಿಮಾನಿಗಳು ಸಂಭ್ರಮಿಸುತ್ತಿದ್ದಾರೆ ಮತ್ತು ಬಾಲಿವುಡ್‌ನಲ್ಲಿಯೂ ಹಬ್ಬದ ವಾತಾವರಣ ಕಾಣುತ್ತಿತ್ತು. ಬಾಲಿವುಡ್ ಸೆಲೆಬ್ರಿಟಿಗಳು ತಂಡಕ್ಕೆ, ಅಭಿನಂದನೆಗಳ ಸುರಿಮಳೆಗೈದಿದ್ದಾರೆ.

ದಕ್ಷಿಣದ ಸೂಪರ್‌ಸ್ಟಾರ್ ಜೂನಿಯರ್ ಎನ್‌ಟಿಆರ್ ತಂಡದ ಗೆಲುವಿನ ಬಗ್ಗೆ ಸಂತೋಷ ವ್ಯಕ್ತಪಡಿಸಿ, 'ನಮ್ಮ' 'ಮೆನ್ ಇನ್ ಬ್ಲೂ' ಪಂದ್ಯಾವಳಿಯಾದ್ಯಂತೆ ಶಾಂತ, ಸಂಯೋಜಿತ ಮತ್ತು ಪ್ರಾಬಲ್ಯದ ಪ್ರದರ್ಶನದೊಂದಿಗೆ ಮತ್ತೆ ಟ್ರೋಫಿಯನ್ನು ಗೆದ್ದಿದೆ ಮತ್ತು ಹೊಸ ಇತಿಹಾಸವನ್ನು ಸೃಷ್ಟಿಸಿದೆ. ಟೀಮ್ ಇಂಡಿಯಾಕ್ಕೆ ಅಭಿನಂದನೆಗಳು. ಇಡೀ ದೇಶ ಅಂದು ರಾತ್ರಿ ಸಂಭ್ರಮದಿಂದ ಶಾಂತಿಯುತವಾಗಿ ಮಲಗಲು ಸಾಧ್ಯವಾಗುತ್ತದೆ' ಎಂದು ಬರೆದಿದ್ದಾರೆ.

## ಪ್ರತಿಭಟನೆ...

ಪ್ರಜಾವಾಣಿ ಚಿತ್ರ



**ಕನಿಷ್ಠ ವೇತನ ಜಾರಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ರಾಜ್ಯ ಅಂಗನವಾಡಿ ನೌಕರರ ಸಂಘದ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಎರಡನೇ ದಿನವಾದ ಮಂಗಳವಾರವೂ ಪ್ರತಿಭಟನೆ ನಡೆಸಿದರು**

Publication Date
25/03/2026

Presented by ಪ್ರಜಾವಾಣಿ

# ಏ.1ರಿಂದ ಟೋಲ್ ದರ ದುಬಾರಿ: ಕಾರುಗಳಿಗೆ ರೂ.5ರಿಂದ ರೂ.10, ವಾಣಿಜ್ಯ ವಾಹನಗಳಿಗೆ ರೂ.15ರಿಂದ ರೂ.45ರವರೆಗೆ ಹೆಚ್ಚಳ

**ಬೆಂ**ಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆಚ್ಚಾರಿಯಲ್ಲಿರುವ ಕಣಿಮಿಣಿಕೆ ಮತ್ತು ಶೇಷಗಿರಿಹಳ್ಳಿ, ಬೆಂಗಳೂರು–ಹೈದರಾಬಾದ್ ಹೆದ್ದಾರಿಯಲ್ಲಿರುವ ಬಾಗೇಪಲ್ಲಿ, ಬೆಂಗಳೂರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಸಾದರಹಳ್ಳಿ, ಬೆಂಗಳೂರು–ತಿರುಪತಿ ಹೆದ್ದಾರಿಯಲ್ಲಿ ನಂಗಲಿ, ಬೆಂಗಳೂರು ಸ್ಯಾಟಲೈಟ್ ಟೌನ್ ರಿಂಗ್ ರಸ್ತೆಯಲ್ಲಿರುವ (ಎಸ್‌ಟಿಆರ್‌ರ್) ಹುಲಿಕುಂಟೆ, ನಲ್ಲೂರು ದೇವನಹಳ್ಳಿ ಟೋಲ್ ಪ್ಲಾಜಾಗಳು ಸೇರಿವೆ.

ಬೆಂಗಳೂರು: ರಾಜ್ಯದ 62 ಟೋಲ್ ಪ್ಲಾಜಾಗಳಲ್ಲಿ ಏ.1ರಿಂದ ಟೋಲ್ ದರ ಶೇ.3 ರಿಂದ 5 ರಷ್ಟು ಏರಿಕೆಯಾಗಲಿದೆ. ಸಗಟು ಬೆಲೆ ಸೂಚ್ಯಂಕಕ್ಕೆ (ಹಣದು ಬ್ಬರಕ್ಕೆ) ಅನುಗುಣವಾಗಿ ಶುಲ್ಕ ಹೆಚ್ಚಳ ಮಾಡಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಕಾರು ಏಕಮುಖವಾಗಿ ಪ್ರಯಾಣಿಸುವಾಗ ಎರಡು ಪ್ಲಾಜಾಗಳಲ್ಲಿ ರೂ.345 ಇದ್ದಿದ್ದು ರೂ.355 ಆಗಲಿದೆ. ಮಿನಿ ಬಸ್‌ಗಳು ಮತ್ತು ಲಘು ವಾಣಿಜ್ಯ ವಾಹನಗಳು ರೂ.555 ಬದಲು ರೂ.565 ಪಾವತಿ ಮಾಡಬೇಕಾಗುತ್ತದೆ. ಸಾದಹಳ್ಳಿ, ಬಾಗೇಪಲ್ಲಿ, ಗದ್ದೂರು ಮುಂತಾದ ಟೋಲ್ ಪ್ಲಾಜಾಗಳಲ್ಲಿ ಕಾರುಗಳಿಗೆ ಹಳೇ ದರವೇ ಇರಲಿದೆ. ಆದರೆ, ಉಳಿದ ವಾಹನ ಗಳಿಗೆ ರೂ.15ರಿಂದ 45ರವರೆಗೆ ಏರಿಕೆ ಯಾಗಲಿದೆ.

ಎನ್‌ಎಚ್‌ಎಐ ತನ್ನ ವಾರ್ಷಿಕ ಪಾಸ್‌ನ್ನು 2026–27ನೇ ಸಾಲಿಗೆ ರೂ.75 ಹೆಚ್ಚಳ ಮಾಡಿ ಅಧಿಸೂಚನೆ ಹೊರಡಿಸಿದೆ. ಇದು ಕೂಡ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ. ವಾರ್ಷಿಕ ಪಾಸ್ ದರವು ರೂ.3,000 ಇದ್ದಿದ್ದು. ರೂ.3075 ಆಗಲಿದೆ.

ರಾಷ್ಟ್ರೀಯ ಹೆದ್ದಾರಿಗಳನ್ನು ನಿಯಮಿತವಾಗಿ ಬಳಸುವ ಪ್ರಯಾಣಿಕರಿಗಾಗಿ ಪಾಸ್ ಸೌಲಭ್ಯವನ್ನು 2025ರ ಆಗಸ್ಟ್ 15ರಂದು ಆರಂಭಿಸಲಾಗಿತ್ತು. ಇದರ ಅವಧಿಯು ಒಂದು ವರ್ಷ ಇಲ್ಲವೇ 200 ಟೋಲ್ ಪ್ಲಾಜಾ ಕ್ರಾಸಿಂಗ್‌ಗಳಿಗೆ ಅನ್ವಯ ವಾಗುತ್ತದೆ. ಒಂದು ಬಾರಿ ಪಾಸ್ ಮೊತ್ತ ಪಾವತಿ ಸಿದರೆ ಪದೇ ಪದೇ ಫಾಸ್ಟ್ಯಾಗ್ ರೀಚಾರ್ಜ್ ಮಾಡುವುದು ತಪ್ಪುತ್ತದೆ. ವಾಣಿಜ್ಯೇತರ ವಾಹನಗಳಿಗೆ ಮಾತ್ರ ಈ ಸೌಲಭ್ಯವನ್ನು ಎನ್‌ಎಚ್‌ಎಐ ಒದಗಿಸಿದೆ.

ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮ–2008ರ ನಿಬಂಧನೆಗಳಿಗೆ ಅನುಗುಣವಾಗಿ ಶುಲ್ಕ ಪರಿಷ್ಕರಣೆ ಮಾಡಲಾಗಿದೆ. ಈ ಪ್ರಕ್ರಿಯೆ ಪ್ರತಿ ಹಣಕಾಸು ವರ್ಷದ ಆರಂಭದಲ್ಲಿ ನಡೆಯುತ್ತದೆ. 2008ಕ್ಕಿಂತ ಮೊದಲು ಆರಂಭವಾಗಿರುವ ಬಿಲ್ಡ್ ಆಪರೇಟ್ ಟ್ರಾನ್ಸ್‌ಫರ್ (ಬಿಒಟಿ) ಟೋಲ್ ಪ್ಲಾಜಾಗಳಿಗೆ 1997ರ ಶುಲ್ಕ ನಿಯಮಗಳು ಅನ್ವಯವಾಗುತ್ತದೆ ಎಂದು ಎನ್‌ಎಚ್‌ಎಐ ಯೋಜನಾ ನಿರ್ದೇಶಕ ಕೆ.ಬಿ. ಜಯಕುಮಾರ್ ತಿಳಿಸಿದ್ದಾರೆ.

'ಟೋಲ್ ದರ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುವ ಬದಲು ಹೆಚ್ಚಳವಾಗುತ್ತಿದೆ. ಉದಾಹರಣೆಗೆ ಒಂದು ರಸ್ತೆಯಲ್ಲಿ ದಿನಕ್ಕೆ 10 ಸಾವಿರ ವಾಹನಗಳು ಈ ವರ್ಷ ಸಂಚರಿಸುತ್ತಿದ್ದರೆ, ಮುಂದಿನ ವರ್ಷ ವಾಹನಗಳ ಸಂಖ್ಯೆ 12



ಸಾವಿರಕ್ಕೆ ಏರಿಕೆಯಾಗಲಿದೆ. ರಸ್ತೆ ನಿರ್ಮಿಸು ವಾಗಲೇ ಎಷ್ಟು ವಾಹನಗಳು ಹೋಗಬಹುದು ಎಂಬುದನ್ನು ಸರ್ವೆ ಮಾಡಿರುತ್ತಾರೆ.

ರಸ್ತೆಗೆ ಒಟ್ಟು ಎಷ್ಟು ವೆಚ್ಚವಾಗಿದೆ ಎಂಬ ಲೆಕ್ಕ ಇರುತ್ತದೆ. ಟೋಲ್ ಮೂಲಕ ಎಷ್ಟು ವರ್ಷದಲ್ಲಿ ಆ ಹಣ ವಾಪಸ್ ಬರುತ್ತದೆ ಎಂಬುದೂ ಗೊತ್ತಿರುತ್ತದೆ. ಆದರೂ ಹಗಲುದರೋಡೆ ಮುಂದುವರಿಸುತ್ತಾರೆ' ಎಂದು ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ ಶರ್ಮ ಅಸಮಾಧಾನ ವ್ಯಕ್ತಪಡಿಸಿದರು.

'ವಾಣಿಜ್ಯ ವಾಹನಗಳ ಮಾಲೀಕರು ರಸ್ತೆ ತೆರಿಗೆ ಪಾವತಿಸುತ್ತಾರೆ. ಆ ನಂತರ ಡೀಸೆಲ್‌ನಲ್ಲಿ ರಸ್ತೆ ನಿರ್ವಹಣೆಗೆ ಸೆಸ್ ಕಟ್ಟುತ್ತಾರೆ. ಜಿಎಸ್‌ಟಿ ಪಾವತಿಸುತ್ತಾರೆ. ಮತ್ತೆ ಈ ರೀತಿಯ ಅವೈಜ್ಞಾನಿಕ ಟೋಲ್ ಯಾಕೆ? ರಸ್ತೆ ನಿರ್ಮಿಸಿದ ಮೇಲೆ ನಿರ್ವಹಣಾ ವೆಚ್ಚ ಬಿಟ್ಟು ಬೇರೆ ಯಾವುದೇ ಖರ್ಚು ಇಲ್ಲದೇ ಇರುವಾಗ ಟೋಲ್ ಏರಿಕೆ ಮಾಡುತ್ತಿರುವುದು ಕೇಂದ್ರ ಸರ್ಕಾರದ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ದರೋಡೆ ಅಲ್ಲದೇ ಮತ್ತೇನು' ಎಂದು ಪ್ರಶ್ನಿಸಿದರು.



ನಗು ನಗುತಾ ನಲಿ ನಲಿ!....



# ‘ಧುರಂಧರ್ 2’ ಪ್ರೀಮಿಯರ್ ದಾಖಲೆಗಳ ಮೈಲಿಗಲ್ಲು



**ಭಾ**ರತೀಯ ಸಿನೆಮಾ ಲೋಕದಲ್ಲಿ ಇತ್ತೀಚಿನ ದಿನಗಳಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿರುವ ಚಿತ್ರವೆಂದರೆ Dhurandhar: The Revenge. ಬಾಲಿವುಡ್‌ನ ಶಕ್ತಿಶಾಲಿ ನಟ Ranveer Singh ಅಭಿನಯದ ಈ ಆಕ್ಷನ್–ಥ್ರಿಲ್ಲರ್ ಸಿನಿಮಾ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಬಾಕ್ಸ್ ಆಫೀಸ್‌ನಲ್ಲಿ ಅಪ್ರತಿಮ ಸಾಧನೆ ಮಾಡಿದೆ.

ಬಾಲಿವುಡ್ ನಟ ರಣವೀರ್ ಸಿಂಗ್ ಅಭಿನಯದ ‘ಧುರಂದರ್ ದಿ ರಿವೇಂಜ್’ ಚಿತ್ರವು ಬಿಡುಗಡೆಯ ಮೊದಲೇ ಪೇಡ್ ಪ್ರೀಮಿಯರ್ ಪ್ರದರ್ಶನಗಳಿಂದ ಭಾರೀ ದಾಖಲೆ ನಿರ್ಮಿಸಿದೆ. ದೇಶದಾದ್ಯಂತ ನಡೆದ ವಿಶೇಷ ಪ್ರದರ್ಶನಗಳಿಂದಲೇ ಚಿತ್ರವು 52 ಕೋಟಿ ಗ್ರಾಸ್ ವಸೂಲಿ ಮಾಡಿದ್ದು, ಭಾರತೀಯ ಚಿತ್ರರಂಗದಲ್ಲಿ ಹೊಸ ಮೈಲುಗಲ್ಲು ನಿರ್ಮಿಸಿದೆ. ಟ್ರ್ಯಾಕಿಂಗ್ ವೆಬ್‌ಸೈಟ್ ವರದಿ ಪ್ರಕಾರ, ಚಿತ್ರವು ದೇಶೀಯ ಬಾಕ್ಸ್ ಆಫೀಸ್‌ನಲ್ಲಿ 44 ಕೋಟಿ ನೆಟ್ ಕಲೆಕ್ಷನ್ ಗಳಿಸಿದೆ. 12,000ಕ್ಕೂ ಹೆಚ್ಚು ಪ್ರದರ್ಶನಗಳಲ್ಲಿ (ಸುಮಾರು 12,292 ಶೋಗಳು) ಬಿಡುಗಡೆಯಾದ ಈ ಚಿತ್ರವು ಪೇಡ್ ಪ್ರೀಮಿಯರ್ ವಸೂಲಿಯಲ್ಲಿ ಹಿಂದಿನ ಎಲ್ಲ ದಾಖಲೆಗಳನ್ನು ಮೀರಿಸಿದೆ. ಇದರಿಂದ ಮೊದಲ ಭಾಗ ಧುರಂದರ್ ಚಿತ್ರದ ಮೊದಲ ದಿನದ 33 ಕೋಟಿ ಗಳಿಕೆಯನ್ನು ಕೂಡ ಮೀರಿಸಿದೆ. ಹೆಚ್ಚಿನ ಟಿಕೆಟ್ ದರ ಇದ್ದರೂ ಪ್ರೇಕ್ಷಕರ ಕುತೂಹಲ ಕಡಿಮೆಯಾಗದೆ, ದೇಶದ ವಿವಿಧ ಭಾಗಗಳಲ್ಲಿ ಥಿಯೇಟರ್‌ಗಳು ಜನಸಂದಣಿಯಿಂದ ಕಿಕ್ಕಿರಿದವು ಎಂದು ತಿಳಿದುಬಂದಿದೆ.

ಚಿತ್ರವು ಬಿಡುಗಡೆಯ ಮೊದಲ ದಿನವೇ ವಿಶ್ವದಾದ್ಯಂತ ರೂ. 240 ಕೋಟಿಗೂ ಹೆಚ್ಚು ಗಳಿಕೆ ಮಾಡಿ ಹೊಸ ದಾಖಲೆ ನಿರ್ಮಿಸಿತು. ಪ್ರೇಕ್ಷಕರಿಂದ ದೊರೆತ ಭಾರಿ ಸ್ಪಂದನೆ ಚಿತ್ರವನ್ನು ಮೊದಲ ವಾರದಲ್ಲೇ ರೂ.500 ಕೋಟಿಯ ಗಡಿಯನ್ನು ದಾಟುವಂತೆ ಮಾಡಿತು ಹಾಗೂ 7–8 ದಿನಗಳಲ್ಲಿ ಚಿತ್ರವು ರೂ.1000 ಕೋಟಿಗೂ ಹೆಚ್ಚು ವಸೂಲಿ ಮಾಡಿ ‘ಸಾವಿರ ಕೋಟಿ ಕ್ಲಬ್’ ಸೇರಿದೆ. ಇದು ಭಾರತೀಯ ಚಿತ್ರರಂಗದಲ್ಲಿ ಅತಿ ವೇಗವಾಗಿ ಈ ಸಾಧನೆ ಮಾಡಿದ ಸಿನಿಮಾಗಳಲ್ಲಿ ಇದು ಒಂದಾಗಿದೆ. ಭಾರತದಲ್ಲೇ ರೂ. 650–?700 ಕೋಟಿವರೆಗೆ ಗಳಿಕೆ ಮಾಡಿರುವುದು ಗಮನಾರ್ಹ.

ಈ ಚಿತ್ರದ ಯಶಸ್ಸಿನಲ್ಲಿ Ranveer Singh ಅವರ ಅಭಿನಯ ಪ್ರಮುಖ ಪಾತ್ರವಹಿಸಿದೆ. ಅವರ ಎನರ್ಜಿ, ಆಕ್ಷನ್ ಸನ್ನಿವೇಶಗಳು ಮತ್ತು ಭಾವನಾತ್ಮಕ ಅಭಿನಯ ಪ್ರೇಕ್ಷಕರ ಮನಗೆದ್ದಿವೆ. ‘ಧುರಂಧರ: ದ ರಿವೆಂಜ್’ ಕೇವಲ ಒಂದು ಹಿಟ್ ಸಿನಿಮಾ ಅಲ್ಲ; ಇದು ಬಾಲಿವುಡ್ ಬಾಕ್ಸ್ ಆಫೀಸ್ ಇತಿಹಾಸವನ್ನು ಮರುಬರೆಯುತ್ತಿರುವ ಚಿತ್ರವಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ದಾಖಲೆಗಳನ್ನು ಮುರಿಯುವ ಸಾಧ್ಯತೆ ಇದೆ ಎಂಬ ನಿರೀಕ್ಷೆ ಇದೆ. ಒಟ್ಟಿನಲ್ಲಿ, ಈ ಸಿನಿಮಾ “ಆಲ್ ಟೈಮ್ ಬ್ಲಾಕ್‌ಬಸ್ಟರ್” ಎಂಬ ಹೆಗ್ಗಳಿಕೆಗೆ ಅರ್ಹವಾಗಿದೆ.

ಚಿತ್ರದಲ್ಲಿ ರಣವೀರ್ ಸಿಂಗ್ ಜೊತೆಗೆ ಮಾಧವನ್, ಅರ್ಜುನ್ ರಾಮ್ ಪಾಲ್, ಸಂಜಯ್ ದತ್ತ, ಸಾರಾ ಅರ್ಜುನ್, ರಾಕೇಶ್ಬೇಡಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ಮೊದಲ ಭಾಗವು ವಿಶ್ವದಾದ್ಯಂತ 1,300 ಕೋಟಿ ವಸೂಲಿ ಮಾಡಿತ್ತು. ಇದೀಗ ಎರಡನೇ ಭಾಗವೂ ಅದನ್ನು ಮೀರಿಸುವ ನಿರೀಕ್ಷೆ ವ್ಯಕ್ತವಾಗಿದೆ.



# 18ನೇ ಐಪಿಎಲ್ ಕ್ರಿಕೆಟ್ ಪಂದ್ಯಗಳು ಮಾರ್ಚ್ 28ರಿಂದ ಪ್ರಾರಂಭ


Indian Premier League 2026 ಕ್ರಿಕೆಟ್ ಪ್ರಪಂಚದ ಪ್ರಮುಖ ಕ್ರೀಡಾ ಹಬ್ಬಗಳಲ್ಲಿ ಒಂದಾಗಿ ಮುಂದುವರಿಯುತ್ತಿದೆ. ಇದನ್ನು Board of Control for Cricket in India ಆಯೋಜಿಸುತ್ತದೆ.




ಈ ಟೂರ್ನಿಯಲ್ಲಿ 10 ತಂಡಗಳು ಭಾಗವಹಿಸಿ, ಸುಮಾರು ಎರಡು ತಿಂಗಳ ಕಾಲ ಭಾರತದೆಲ್ಲೆಡೆ ಪಂದ್ಯಗಳು ನಡೆಯುತ್ತವೆ. ಲೀಗ್ ಹಂತದಲ್ಲಿ ತಂಡಗಳು ಪರಸ್ಪರ ಸ್ಪರ್ಧಿಸಿ ಅಂಕಗಳನ್ನು ಗಳಿಸುತ್ತವೆ. ಅಗ್ರ ನಾಲ್ಕು ತಂಡಗಳು ಪ್ಲೇಆಫ್ ಹಂತಕ್ಕೆ ಪ್ರವೇಶಿಸಿ ಅಂತಿಮವಾಗಿ ಫೈನಲ್‌ನಲ್ಲಿ ವಿಜೇತ ತಂಡದ ತೀರ್ಮಾನವಾಗುತ್ತದೆ. ಈ ಎಲ್ಲಾ ಐಪಿಎಲ್ ಪಂದ್ಯಗಳು Bengaluru, Mumbai, Chennai ಮತ್ತು Kolkata ಸೇರಿದಂತೆ ಪ್ರಮುಖ ನಗರಗಳಲ್ಲಿ ನಡೆಯುತ್ತವೆ. ಐಪಿಎಲ್ ಯುವ ಪ್ರತಿಭೆಗಳಿಗೆ ವೇದಿಕೆ ನೀಡುವುದರ ಜೊತೆಗೆ ಜಾಗತಿಕ ಮಟ್ಟದಲ್ಲಿ ಭಾರತದ ಕ್ರಿಕೆಟ್ ಪ್ರತಿಷ್ಠೆಯನ್ನು ಹೆಚ್ಚಿಸುವ ಮಹತ್ವದ ಟೂರ್ನಿಯಾಗಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಮೊದಲ 16 ದಿನಗಳ ವೇಳಾಪಟ್ಟಿಯನ್ನು ಮುಂಬೈನಲ್ಲಿ ಬಿಸಿಸಿಐ ಪ್ರಕಟಿಸಿದ್ದು ಇದರಲ್ಲಿ ಮೊದಲ ನಾಕ್‌ಔಟ್ 20 ಪಂದ್ಯಗಳು ನಡೆಯಲಿದ್ದು, ಐದು ರಾಜ್ಯಗಳ ಚುನಾವಣೆ ನಂತರ ಇನ್ನುಳಿದ ಪಂದ್ಯಗಳು ನಡೆಯಲಿವೆ.

ಮಾರ್ಚ್ 28 ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್ ರೈಸರ್ಸ್ ಹೈದರಾಬಾದ್ ತಂಡಗಳು ಮುಖಾ ಮುಖಿಯಾಗಲಿದೆ. ಏಪ್ರಿಲ್ 5ರಂದು ಇಲ್ಲಿ ನಡೆಯುವ ಇನ್ನೊಂದು ಪಂದ್ಯದಲ್ಲಿ ಆರ್‌ಸಿಬಿ ಮತ್ತು ಚೆನ್ನೈ ಸೂಪರ್ ಕಿಂಗ್ ಆದರೆ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ನವೀಕರಣ ಕಾಮಗಾರಿಯ ಕುರಿತು ಸರ್ಕಾರ ನೇಮಕ ಮಾಡಿರುವ ಪರಿಶೀಲನಾ ಸಮಿತಿಯು ಇದೇ 13ರಂದು ಅವಲೋಕನ ಮಾಡಿ ಗ್ರೀನ್ ಸಿಗ್ನಲ್ ನೀಡಿದೆ. ಹೋದ ವರ್ಷ ಜೂನ್‌ನಲ್ಲಿ ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತದಲ್ಲಿ 11 ಅಭಿಮಾನಿಗಳು ದುರ್ಮರಣಕ್ಕೀಡಾಗಿದ್ದರು. ಅದರ ಕಹಿ ನೆನಪು ಮಧ್ಯ ವಿಷಾದ ಛಾಯೆ ನಡುವೆ ಪಂದ್ಯಗಳು ಆರಂಭವಾಗುತ್ತಿದೆ.




ಚುನಾವಣೆ ನಡೆಯಲಿರುವ ಆಯಾ ರಾಜ್ಯಗಳ ಕ್ರೀಡಾಂಗಣಗಳಲ್ಲಿ ನಿಗದಿಯಾಗಿರುವ ಪಂದ್ಯಗಳನ್ನು ಬೇರೆಡೆ ಸ್ಥಳಾಂತರಿಸುವ ಸಾಧ್ಯತೆಗಳೂ ಇವೆ. ಪಶ್ಚಿಮ ಏಷ್ಯಾದಲ್ಲಿ ನಡೆದಿರುವ ಯುದ್ಧದಿಂದಾಗಿ ಪ್ರಮುಖ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಗಳು ಇರುವ ದೋಹಾ ಮತ್ತು ದುಬೈಗಳಲ್ಲಿ ವಿಮಾನಯಾನವೂ ಅಸ್ತವ್ಯಸ್ತವಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹೋದ ವರ್ಷ ನಡೆದ ಆರ್‌ಸಿಬಿ ವಿಜಯೋತ್ಸವ ಕಾರ್ಯಕ್ರಮದಲ್ಲಿ ಟ್ರೋಫಿಯೊಂದಿಗೆ ವಿರಾಟ್ ಕೊಹ್ಲಿ ಸಂಭ್ರಮಿಸಿದ್ದರು.

ಬೆಂಗಳೂರು ಕ್ರೀಡಾಂಗಣದ ಸಿದ್ಧತೆಯ ಮಟ್ಟವನ್ನು ಪರಿಶೀಲಿಸಲು ಇದೇ 13ರಂದು ಪ್ರದರ್ಶನ ಪಂದ್ಯವನ್ನು ನಡೆಸಲಾಗಿದ್ದು ಎಲ್ಲಾ ಗೊಂದಲಗಳಿಗೆ ತೆರೆ ಎಳೆದಂತಾಗಿದೆ. ಈ ಮಧ್ಯೆ ಕೆಲವು ವಿದೇಶಿ ಆಟಗಾರರು ಐಪಿಎಲ್ ಟೂರ್ನಿಗೆ ಆಗಮಿಸುವ ಬಗ್ಗೆಯೂ ಸಹ ಖಚಿತಪಡಿಸಿದೆ. 'ಭಾರತದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದ ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಆಟಗಾರರಿಗೆ ತಮ್ಮ ತವರಿಗೆ ಹಿಂತಿರುಗಲು ಇನ್ನೂ ಸಾಧ್ಯವಾಗಿಲ್ಲ. ಆ ತಂಡಗಳಲ್ಲಿರುವ ಐಪಿಎಲ್ ಆಟಗಾರರು ಸರಿಯಾದ ಸಮಯಕ್ಕೆ ಮತ್ತೆ ಇಲ್ಲಿಗೆ ಬರುವುದು ಕಷ್ಟವಾಗಲಿದೆ' ಎಂದು ತಂಡದ ಮೂಲಗಳು ಅನುಮಾನ ವ್ಯಕ್ತಪಡಿಸಿವೆ. ಟೂರ್ನಿಯ ಎರಡನೇ ಪಂದ್ಯವು ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿದ್ದು ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಮುಂಬೈ ಇಂಡಿಯನ್ಸ್ ಮುಖಾಮುಖಿ ಯಾಗಲಿವೆ. ಈ ಋತುವಿನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ತವರಿನಂಗಳದಲ್ಲಿ ಐದು ಪಂದ್ಯಗಳನ್ನು ಆಡಲಿದೆ. ಎರಡು ಪಂದ್ಯಗಳನ್ನು ರಾಯಪುರದಲ್ಲಿ ಆಡಲಿದೆ. ಪಂಜಾಬ್ ಕಿಂಗ್ಸ್ ತಂಡವು ತನ್ನ ತವರು ಚಂಡೀಗಡದಲ್ಲಿ (ಮುಲ್ಲನಪುರ) ನಾಲ್ಕು ಮತ್ತು ಧರ್ಮಶಾಲಾದಲ್ಲಿ ಮೂರು ಪಂದ್ಯಗಳನ್ನು ಆಡಲಿದೆ. ರಾಜಸ್ಥಾನ ರಾಯಲ್ಸ್ ಗುವಾಹಟಿ ಯಲ್ಲಿ ಮೂರು ಮತ್ತು ಜೈಪುರದಲ್ಲಿ ನಾಲ್ಕು ಪಂದ್ಯಗಳನ್ನು ಆಡಲಿದೆ' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮೊದಲ ಹಂತದ ವೇಳಾ ಪಟ್ಟಿಯ ಪ್ರಕಾರ ನಾಲ್ಕು ಡಬಲ್ ಹೆಡ್ಡರ್ ಗಳು ಇರಲಿವೆ. ಪಂದ್ಯಗಳು ಮಧ್ಯಾಹ್ನ 3.30ಕ್ಕೆ ಹಾಗೂ ರಾತ್ರಿ 7.30ಕ್ಕೆ ಆರಂಭವಾಗಲಿವೆ' ಎಂದೂ ತಿಳಿಸಲಾಗಿದೆ. ಈ ಪಂದ್ಯಗಳ ವೀಕ್ಷಕರಿಗೆ ರೋಚಕಗಳೊಂದಿಗೆ ಕ್ರೀಡಾ ರಸದೌತಣ ನೀಡುವುದರಲ್ಲಿ ಸಂಶಯವೇ ಇಲ್ಲವೆನ್ನಬಹುದು.

Editor & Editorial Board, Publisher and Owned by Janaki Vijayakumar # 555, 17th Cross, SBM Colony, Srinivasanagar, Banashankari, Bengaluru-560050. Printed At : M/s Apoorva Printers & Publishers, 179, Suggata Road, H.M. Halli, Bengaluru-562157.